ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್రಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ಫೆಬ್ರವರಿ - ೨೦೧೫ ಸಂಚಿಕೆ - ೦೭

ನೇಗಿಲ ಹಿಡಿದ ಹೊಲದೊಳು ಹಾಡುತ
ಉಳುವ ಯೋಗಿಯ ನೋಡಲ್ಲಿ.
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮುಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ.
ನೇಗಿಲ ಕುಳದೊಳಡಗಿದೆ ಕರ್ಮ;
ನೇಗಿಲ ಮೇಲೆಯೇ ನಿಂತಿದೆ ಧರ್ಮ.

– ಕುವೆಂಪು

ಸರ್ಕಾರದಿಂದಲೇ ಭೂ ಕಬಳಿಕೆ !
ಜನರ ಪಾತ್ರವೇನು?

ಜನಪದ ವಿಚಾರದಲ್ಲಿ

ಫೆಬ್ರವರಿ – ೨೦೧೫

೧) ಸರ್ಕಾರದಿಂದಲೇ ಭೂ ಕಬಳಿಕೆ ! ಜನರ ಪಾತ್ರವೇನು?

– ಸುರೇಂದ್ರ ಕೌಲಗಿ

ಒಂದು ಈಸ್ಟ್ ಇಂಡಿಯಾ ಕಂಪನಿ ದೇಶದ ಸ್ವಾತಂತ್ರ್ಯ ಹರಣ ಮಾಡಿತ್ತು. ಅನೇಕಾನೇಕ ಬಹು ರಾಷ್ಟ್ರೀಯ ಕಂಪನಿಗಳು ಆಗಮಿಸುತ್ತಿರುವ ಸಂದರ್ಭದಲ್ಲಿ ಈ ಲೇಖನ.

೨) ಪೊರಕೆ, ಕ್ರಾಂತಿಯ ಪ್ರತೀಕದ ಚಿಹ್ನೆ, ಗುಡಿಸುವುದು ಫ್ಯಾಷನೆಬಲ್ ಇವೆಂಟ್ ಅಲ್ಲ

– ಮೂಲ : ನ್ಯಾ.ಚಂದ್ರಶೇಖರ್ ಧರ್ಮಾಧಿಕಾರಿ

– ಅನು : ಸುರೇಂದ್ರ ಕೌಲಗಿ

ಅತಿ ಸಾಮಾನ್ಯ ವಸ್ತುವೆಂದು ತಿಳಿಯಲ್ಪಟ್ಟಿರುವ ಪೊರಕೆ ಇಂದು ರಾಜಕೀಯ ಕ್ಷೇತ್ರದಲ್ಲಿ ಪುಮುಖ ಪಾತ್ರ ವಹಿಸುತ್ತಿದೆ. ಆ ಬಗ್ಗೆ ಉಂಟಾಗಿರುವ ವಿವಿಧ ವಿಚಾರಗಳ ಸಂಗ್ರಹ ಇಲ್ಲಿದೆ.

೩) ಸನಾತನ ಭಾರತದ ಸದಾತನ ಸಾಹಿತ್ಯ

– ವಿದ್ವಾನ್ ಉಮಾಕಾಂತ ಭಟ್ಟ

ಭಾರತೀಯ ಸಾಹಿತ್ಯದ ಮುಖ್ಯ ವಸ್ತು ಧರ್ಮ, ಪರಮಾತ್ಮ ಮತ್ತು ಧರ್ಮದಿಂದ ದೇವನನ್ನು ಸೇರುವ ಜೀವನಯಾತ್ರೆ. ಈ ವಿಚಾರಗಳನ್ನು ಪ್ರತಿಬಿಂಬಿಸುವ ಭಾರತೀಯ ಸಾಹಿತ್ಯದ ಮೆರುಗನ್ನು ಈ ಲೇಖನದಲ್ಲಿ ಕಾಣಬಹುದು.

೪) ಬಾಲಕರ ಅಣ್ಣ : ಕೈಲಾಶ್ ಸತ್ಯಾರ್ಥಿ

– ಮೂಲ : ಡಾ॥ಆರ್. ಪೊನ್ನು

– ಅನು : ಡಾ.ಹೆಚ್.ಪಾಂಡುರಂಗ ವಿಠಲ

ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದ ಕೈಲಾಶ್ ಸತ್ಯಾರ್ಥಿಯವರ ಜೀವನ, ವಿದ್ಯಾಭ್ಯಾಸ ಹಾಗೂ ಕಾರ್ಯಸಾಧನೆಗಳ ಬಗ್ಗೆ ವಿವರವಾದ ಮಾಹಿತಿ ಈ ಲೇಖನದಲ್ಲಿದೆ.

೫) ಜನಪದ ನಿಲಯದ ಅಂತರಂಗದಲ್ಲಿ – ೧೩೦

೬) ಸನ್ಮಾನ್ಯರಿಂದ

೭) ಸರ್ವೋದಯ ಆಂದೋಲನದ ಮುನ್ನಡೆ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ - ೨೦೧೫
ಸಂಪುಟ - ೧೫
ಸಂಚಿಕೆ - ೦೭

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854

email :
janapada@yahoo.com
Web: janapada.net

ಇದು ವರವೋ ಶಾಪವೋ?

ದೇವರೇ ಯಾಕಾದರೂ ಕೊಟ್ಟೆ
ಒಂದೇ ಒಂದು ಮುಷ್ಟಿಯ ಈ ಗರ್ಭವನ್ನು?
ಇದು ನನ್ನ ಕಂದನ ನಂದನವೇ?
ಕಾಮಾಂಧರ ಸಮರಾಂಗಣವೇ?
ತಿಳಿಯುತ್ತಿಲ್ಲ ಇದು ವರವೋ ಶಾಪವೋ
ಬಲವೋ ದೌರ್ಬಲ್ಯವೋ
ಬಂಧನವೋ ನಿರ್ಬಂಧನವೋ

ಎಷ್ಟು ರಕ್ಷಿಸಿಕೊಳ್ಳಬೇಕು ಬಲಿಗೊಟ್ಟು
ಸ್ವಚ್ಛಂದ ಬಾಲ್ಯದ ದಿನಗಳ
ಗರಿ ಕಿತ್ತು ಕಿತ್ತು?
ಎಷ್ಟು ಶಿಕ್ಷಿಸಿಕೊಳ್ಳಬೇಕು ಆತುಮನ
ತಪದ ಗುರಿಗಳನ್ನೊಡೆದು
ಮಾಡಿ ಚೂರು ಚೂರು?

ಬೆಳಕಲ್ಲಿ ಕತ್ತಲಲ್ಲಿ
ಮನೆಯಲ್ಲಿ, ಶಾಲೆಯಂಗಳದಲ್ಲಿ
ಎಲ್ಲೆಂದರಲ್ಲಿ ನುಗ್ಗುವ ಕಾಮುಕ
ಮನೆಹಾಳ ಗೂಳಿಗಳ ಲಗ್ಗೆ?
ಹೇಗೆ ತಡೆಯಲಿ ಇವರ?

ಕೆಂಡದಂಥ ಕಣ್ಣಲ್ಲಿರುವುದು
ಪ್ರೀತಿಯೇ ನೀತಿಯೇ? ಇಲ್ಲ ಇಲ್ಲ
ಬರಿ ತೆವಲು, ಕ್ಷಣಿಕದಮಲು!
ಇವರೇನು ಬಲ್ಲರು ಸೃಷ್ಟಿಯ ನೆಲೆ?
ಹೆಣ್ಣು ಮಾತ್ರ ಪಡೆದ ವರದ ಬೆಲೆ, ಕಲೆ?

ಗರ್ಭದಲ್ಲೊಂದು ಅಗಾಧ ತಪವಿದೆ
ಫಳಿಸಲಾಗದ ಹಪಹಪಿ ಇದೆ
ಬೇಡುವ ಪಡೆಯುವ ಹದವಿದೆ,
ಮಾತೃತ್ವದ ಮುದವಿದೆ!

ಸೃಷ್ಟಿಯ ಕದವನ್ನೊದ್ದು ನುಗ್ಗುವ ರಾಕ್ಷಸರನ್ನು
ಶಿಕ್ಷಿಸಲು ತೆಗೆದಿಟ್ಟುಕೊಳ್ಳಬೇಕು
ಜಗದಗಲದ ಬಾಗಿಲು

– ಮಾಲತಿ ಪಟ್ಟಣಶೆಟ್ಟಿ

ಚಿಂತನೆಗೊಂದು ಸಂಗತಿ

ಹೊಸ ವರ್ಷವನ್ನು ಹೊಸ ಆಶೋತ್ತರಗಳೊಂದಿಗೆ ಸ್ವಾಗತಿಸಿದ್ದೇವೆ. ಇದೇ ಸಂದರ್ಭದಲ್ಲಿ ಕಾಡುವ ಪ್ರಶ್ನೆ ಏನೆಂದರೆ ನಾವು "ಸುಸ್ಥಿರ ಅಭಿವೃದ್ಧಿ" ಕುರಿತು ಕೆಲವೊಂದು ಸಲ ಉತ್ಸಾಹದಿಂದಲೂ, ಕೆಲವೊಂದು ಸಲ ಕಾಳಜಿ ರಹಿತವಾಗಿ ಮಾತನಾಡುತ್ತೇವೆ. ನಾವು ಎಂದಾದರೂ ಅದರ ಅರ್ಥವೇನೆಂದು ತಿಳಿಯಲು ಪ್ರಯತ್ನಿಸಿದ್ದೇವೆಯೇ? ಅಮೇರಿಕಾದ ವಿಶ್ವವಿದ್ಯಾನಿಲಯಗಳು "ಸುಸ್ಥಿರ ಭವಿಷ್ಯ" ಎಂಬ ವಿಷಯವನ್ನು ಆಧರಿಸಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿವೆ. ವಾಣಿಜ್ಯ ವ್ಯವಹಾರದ ಶಿಕ್ಷಣಕ್ಕೂ ಇದನ್ನು ಅನ್ವಯಿಸುತ್ತವೆ. ಸುಸ್ಥಿರ ಭವಿಷ್ಯ ಎಂದರೇನು?

ಪರಿಸರ ಮತ್ತು ಅಭಿವೃದ್ಧಿ ಕುರಿತಾದ ಜಾಗತೀಕ ಆಯೋಗ ಭರ್ಟ್‌ಲ್ಯಾಂಡ್ ವರದಿಯ ಪ್ರಕಾರ ಸುಸ್ಥಿರ ಅಭಿವೃದ್ಧಿ ಎಂದರೆ ಮುಂದಿನ ಜನಾಂಗ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಅದರ ಸಾಮರ್ಥ್ಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ವರ್ತಮಾನದ ಅಗತ್ಯಗಳನ್ನು ಪೂರೈಸುವ ಅಭಿವೃದ್ಧಿಯೇ "ಸುಸ್ಥಿರ ಅಭಿವೃದ್ಧಿ". ಈ ವ್ಯಾಖ್ಯೆಯನ್ನೇ ಆಗಾಗ್ಗೆ ಹೇಳಲಾಗುತ್ತದೆ. ಈಗ ನಮ್ಮ ಸುತ್ತಮುತ್ತ ಆಗುತ್ತಿರುವ ಅಭಿವೃದ್ಧಿಯನ್ನೇ ನೋಡಿರಿ. ಅದರಲ್ಲಿ ಈ ವ್ಯಾಖ್ಯಾರ್ಥವನ್ನು ಕಾಣ ಬಲ್ಲಿರ? ನಮ್ಮ ಬಂಧು ಬಾಂಧವರು ನಗರಗಳಿಗೆ ಒಳ್ಳೆಯ ಭವಿಷ್ಯ ಹುಡುಕಿಕೊಂಡು ಹೋಗುತ್ತಿದ್ದಾರೆ. ಒಟ್ಟಿನಲ್ಲಿ ನಮ್ಮ ಅಭಿವೃದ್ಧಿಯ ರೀತಿ ಮತ್ತು ನೀತಿ ಆಶಾದಾಯಕವಾಗಿದೆಯೇ ಅಥವಾ ಕೇವಲ ಮರಳುಗಾಡಿನಲ್ಲಿ ಕಾಣುವಂತ ನೀರ್ಗುದುರೆಯೇ. ಈ ಬಗ್ಗೆ ನೀವು ಚಿಂತನೆ ಮಾಡಬೇಕು.

ಸರ್ಕಾರದಿಂದಲೇ ಭೂ ಕಬಳಿಕೆ! ಜನರ ಪಾತ್ರವೇನು?

- ಸುರೇಂದ್ರ ಕೌಲಗಿ

ಮೋದಿ ಸರ್ಕಾರ ಕಂಪನಿ ಸರ್ಕಾರ ಆಗದಿರಲಿ.

ಇಂದಿನ ಕೇಂದ್ರ ಸರ್ಕಾರ ಅಭಿವೃದ್ಧಿಯೆಂಬ ಹುಚ್ಚು ಕುದುರೆಯನ್ನೇರಿ ದೇಶದ ತುಂಬ ಧೂಳು ಎಬ್ಬಿಸುತ್ತಾ ಓಡುತ್ತಿದೆ. ಆ ಕುದುರೆ ಎಲ್ಲೆಲ್ಲಿ ಓಡುತ್ತದೊ ಆ ಪ್ರದೇಶವೆಲ್ಲ ಸರ್ಕಾರದ ಸ್ವತ್ತಾಗುತ್ತಿದೆ ! ಈಗ ನಮ್ಮ ಮುಂದೆ ಇರುವ ಪ್ರಶ್ನೆ ಆ ಹುಚ್ಚು ಕುದುರೆಗೆ ತನ್ನ ಮನಸೋ ಇಚ್ಛೆ ಓಡಲು ಅವಕಾಶ ಕೊಡಬೇಕೆ? ಅಥವಾ ಅದನ್ನು ನಿರ್ಬಂಧಿಸಬೇಕೆ? ಕುದುರೆಯನ್ನು ನಿರ್ಬಂಧಿಸುವುದು ಅಷ್ಟು ಸುಲಭದ ಮಾತಲ್ಲ. ಏಕೆಂದರೆ ಇಂದಿನ ಕೇಂದ್ರ ಸರ್ಕಾರ ಬಹುದೊಡ್ಡ ಬಹುಮತದಿಂದ ಆಯ್ಕೆಗೊಂಡಿರುವ ಸರ್ಕಾರ. ಅಂದರೆ ಸರ್ಕಾರ ಮಾಡುವುದೆಲ್ಲ ಆಯ್ಕೆಮಾಡಿದ ಜನರ ಹಿತಕ್ಕಾಗಿಯೆ ಎಂದು ಸರ್ಕಾರವೂ ಭಾವಿಸುತ್ತದೆ ಮತ್ತು ಜನತೆಯೂ ಭಾವಿಸುತ್ತದೆ. ಹೀಗೆ ವೈಚಾರಿಕ ದ್ವಂದ್ವವೊಂದು ಉದ್ಭವಿಸುತ್ತದೆ. ೨೦೧೩ರ ಭೂ ಸ್ವಾಧೀನ ಖಾಯ್ದೆಗೆ ಕಳೆದ ಡಿಸೆಂಬರ್ ೩೧ರಂದು ಹೊರಡಿಸಲಾಗಿರುವ ತಿದ್ದುಪಡಿ ತುರ್ತುಶಾಸನವನ್ನು ವಿರೋಧಿಸಿ ಅಲ್ಲಲ್ಲಿ ಪ್ರತಿಭಟನೆಗಳು ಪ್ರಾರಂಭವಾಗಿವೆ. ಕರ್ನಾಟಕ ಮತ್ತು ಅಸ್ಸಾಂ ರಾಜ್ಯ ಸರ್ಕಾರಗಳು ಕೇಂದ್ರ ಜಾರಿಪಡಿಸಿರುವ ತುರ್ತು ಮಸೂದೆಯಲ್ಲಿಯ ಭೂಸ್ವಾಧೀನ ಅಂಶಗಳನ್ನು ಜಾರಿಗೆ ತರುವುದಿಲ್ಲವೆಂದು ಹೇಳಿವೆ. ಇದೊಂದು ರೀತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಉಂಟಾದ ಘರ್ಷಣೆ. ಈ ವಿಷಯದಲ್ಲಿ ಯಾರು ಸೋಲುತ್ತಾರೆಂಬುದು ಕುತೂಹಲದ ಸಂಗತಿ. ತುರ್ತು ಶಾಸನದ ಭೂಸ್ವಾಧೀನ ಆಶಯಗಳನ್ನು ರಾಜ್ಯ ಸರ್ಕಾರಗಳು ಈಡೇರಿಸದೆ ಇದ್ದರೆ ಆ ರಾಜ್ಯಗಳೇ ಅಭಿವೃದ್ಧಿಯಲ್ಲಿ ಹಿಂದುಳಿದು ಪಶ್ಚಾತ್ತಾಪ ಪಡಬೇಕಾಗಬಹುದೆಂಬ ಭೀತಿಯನ್ನು ಸರ್ಕಾರದ ಅರ್ಥಮಂತ್ರಿ ವ್ಯಕ್ತಪಡಿಸಿದ್ದಾರೆ. ಅಭಿವೃದ್ಧಿಯ ವಿಷಯದಲ್ಲಿ ರಾಜ್ಯ ರಾಜ್ಯಗಳ ಮಧ್ಯೆ ಪೈಪೋಟಿ ನಡೆಯುತ್ತಿರುವಾಗ ಕರ್ನಾಟಕ ಮತ್ತು ಅಸ್ಸಾಂ ರಾಜ್ಯಗಳ ಸರ್ಕಾರಗಳು ಯಾವ ನಿಲುವನ್ನು ತೆಗೆದುಕೊಳ್ಳುತ್ತವೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಒತ್ತಡಕ್ಕೆ ಒಳಗಾಗಿ ಆ ಸರ್ಕಾರಗಳು ತಮ್ಮ ನಿಲುವನ್ನು ಬದಲಾಯಿಸಬಹುದು.

ದುಃಖದ ಸಂಗತಿ ಏನೆಂದರೆ ಉಳುವವನಿಗೆ 'ಭೂಮಿ' ಎಂಬ ಎರಡು ಮಹಾನ್ ಕ್ರಿಯೆಗಳ ನಂತರ ಉಳುವವನಿಗಲ್ಲದವನಿಗೆ ಭೂಮಿ ಎಂಬ ಕ್ರಿಯೆಯನ್ನು ಕೇಂದ್ರಸರ್ಕಾರ ೨೦೧೫ರಲ್ಲಿ ಮಾಡಲು ಹೊರಟಿದೆ.

ಉಳುವವನಿಗೆ ಭೂಮಿ ಎಂಬ ಮೊದಲ ಮಹಾನ್ ಕ್ರಿಯೆ ಆದದ್ದು ೧೯೫೧ರಲ್ಲಿ. ಆಗ ಆಚಾರ್ಯ ವಿನೋಬಾ ಭಾವೆಯವರು ತೆಲಂಗಣ ಪ್ರದೇಶದಲ್ಲಿ ಭೂ ಸಮಸ್ಯೆಯನ್ನು ಇಟ್ಟುಕೊಂಡು ಕಮ್ಯುನಿಷ್ಟರು ಹಿಂಸಾಕ್ರಾಂತಿಗೆ ತೊಡಗಿದ್ದಾಗ ವಿನೋಬಾ ಅಲ್ಲಿಗೆ ಹೋಗಿ ಭೂದಾನ ಚಳುವಳಿಯನ್ನು ಪ್ರಾರಂಭಿಸಿದರು. ದೊಡ್ಡ ದೊಡ್ಡ ಭೂ ಮಾಲೀಕರಿಂದ "ಪ್ರೇಮ-ಕರುಣೆ-ಮೈತ್ರಿ" ಮಾತಿನ ಮೂಲಕ ಅಹಿಂಸಾತ್ಮಕವಾಗಿ ಭೂಮಿ ಪಡೆದು ಭೂ ಹೀನರಿಗೆ ಹಂಚಿದರು. ಮುಂದೆ ಅವರು ಹದಿನಾಲ್ಕು ವರ್ಷ ದೇಶಾದ್ಯಂತ ಪಾದಯಾತ್ರೆ ಮಾಡಿ ಸುಮಾರು ೪೫ಸಾವಿರ ಎಕರೆ ಭೂಮಿಯನ್ನು ಪಡೆದು ಕಡು ಬಡವ ಭೂಮಿ ಹೀನರಿಗೆ ಹಂಚಿದರು. ಭೂದಾನ ಆಂದೋಲನದ ಉದ್ದೇಶವಿದ್ದುದು ಉಳುವವನಿಗೇ ಭೂಮಿ ಇರಬೇಕು ಎಂಬುದಾಗಿತ್ತು.

ಮುಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಶ್ರೀ.ಡಿ.ದೇವರಾಜ್ ಅರಸ್ ಈ ತತ್ವದ ಆಧಾರದ ಮೇಲೆಯೇ ರಾಜ್ಯದಲ್ಲಿ ಭೂ ಸುಧಾರಣೆ ಮಾಡಿದರು. ಅದರಿಂದಾಗಿ ನೆಪಮಾತ್ರದ ಭೂ ಮಾಲೀಕತ್ವ ತಪ್ಪಿತು. ಅನೇಕ ಭೂಮಿ ಹೀನರು ಮತ್ತು ರೈತ ಕಾರ್ಮಿಕರು ಭೂಮಿಯನ್ನು ಪಡೆದರು.

ಆದರೆ ಈಗ ಕೇಂದ್ರ ಸರ್ಕಾರವು ಗ್ರಾಮಾಂತರ ಪ್ರದೇಶದಲ್ಲಿ ಭೂಮಿ ಉತ್ತಿ-ಬಿತ್ತಿ ಜೀವನ ಮಾಡುತ್ತಿರುವ ರೈತರಿಂದ ಕಾನೂನು ಬಲದ ಮೂಲಕ ಭೂಮಿ ವಶಮಾಡಿಕೊಳ್ಳುತ್ತಿದೆ ಮತ್ತು ಅದನ್ನು ಉಳುಮೆ ಮಾಡದ ಕೈಗಾರಿಕೋದ್ಯಮಿಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ ಅಭಿವೃದ್ಧಿ ಕೆಲಸಕ್ಕೆ ವಶಪಡಿಸಿಕೊಡುತ್ತಿದೆ. ಸರ್ಕಾರ ಭೂಮಿಯನ್ನು ವಶಪಡಿಸಿಕೊಳ್ಳುವಾಗ ಆಗಬಹುದಾದ ಸಾಮಾಜಿಕ ಪರಿಣಾಮದ ಬಗ್ಗೆ ಆಲೋಚನೆಯನ್ನೇ ಮಾಡುವುದಿಲ್ಲ. ರಕ್ಷಣಾ ಇಲಾಖೆಗೆ, ಕೈಗಾರಿಕಾ ಕ್ಷೇತ್ರಗಳಿಗೆ, ಖಾಸಗಿ ಆಸ್ಪತ್ರೆಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಎಂತಹ ಫಲವತ್ತಾದ ಭೂಮಿಯನ್ನು ಸಹ ಸರ್ಕಾರ ವಶಪಡಿಸಿಕೊಳ್ಳಬಹುದಾಗಿದೆ. ಒಟ್ಟಾರೆಯಾಗಿ ಸರ್ಕಾರದ ಭೂ ಸ್ವಾಧೀನ ಸುಗ್ರೀವಾಜ್ಞೆ ರೈತರ ಧ್ವನಿಯನ್ನು ಅಡಗಿಸುವಂತದ್ದಾಗಿದೆ.

ಸ್ವತಂತ್ರ ದೇಶದ ಸರ್ಕಾರವೇ ತನ್ನ ದೇಶದ ಬೆನ್ನು ಮೂಳೆಯಾದ ರೈತರಿಂದ ಭೂಮಿ ವಶಪಡಿಸಿಕೊಳ್ಳುತ್ತಿದೆ. ಇದೇ ಕೆಲಸವನ್ನು ವಿದೇಶೀ ಸರ್ಕಾರ

ಮಾಡಿದ್ದರೆ ದೇಶದ ಜನತೆ ದೊಡ್ಡ ಚಳುವಳಿಯನ್ನೇ ಪ್ರಾರಂಭಿಸುತ್ತಿದ್ದರು. ಆಗ ಆ ಚಳುವಳಿಗೆ ನೇತೃತ್ವಕೊಡಲು ಗಾಂಧಿಯಂತಹ ಒಬ್ಬ ಮುಖಂಡ ಮುನ್ನೆಲೆಗೆ ಬರುತ್ತಿದ್ದ. ಆದರೆ ಈಗ ಅಂತಹ ಸ್ಥಿತಿಯಿಲ್ಲ. ನಾವೇ ಆಯ್ಕೆಮಾಡಿದ ನಮ್ಮದೇ ಸರ್ಕಾರ ರೈತ ವಿರೋಧಿ ಕೆಲಸ ಮಾಡುತ್ತಿರುವುದರಿಂದ ಚಳುವಳಿ ಹೂಡುವುದು ಕಷ್ಟ ಸಾಧ್ಯ. ಆದರೆ ಚಳುವಳಿಯನ್ನು ಹೂಡದೆ ಸರ್ಕಾರದ ನೀತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಸರ್ಕಾರ ತಪ್ಪು ನೀತಿಯನ್ನು ಅನುಸರಿಸಿದಾಗ ಸಂಘಟಿತ ಚಳುವಳಿಮಾಡುವುದೇ ಸ್ವರಾಜ್ಯದ ಸಿದ್ಧಾಂತವಾಗಿದೆ. ಆದ್ದರಿಂದ ಜನತೆ ತಮ್ಮ ಪಾತ್ರದ ಬಗ್ಗೆ ಆಲೋಚನೆ ಮಾಡಬೇಕು. ಸ್ವರಾಜ್ಯ ಪ್ರಾಪ್ತಿಗಾಗಿ ಹೇಗೆ ವಿದೇಶೀ ವಸ್ತುಗಳನ್ನು ಬಹುಷ್ಕರಿಸಲಾಯಿತೋ ಅದೇ ರೀತಿ ಬಹು ರಾಷ್ಟ್ರೀಯ ಕಂಪನಿಗಳ ವಸ್ತುಗಳನ್ನು ಬಹಿಷ್ಕರಿಸಲು ಜನತೆ ಸಿದ್ಧವಾಗಬೇಕು. ಹಣದ ಬೆನ್ನತ್ತಿ ಓಡುವ ಮನೋಭಾವವನ್ನು ಬಿಡಬೇಕು. ಹಣದ ಆಮಿಷ ತೋರಿಸಿಯೇ ಸರ್ಕಾರ ದೇಶದ ಜನತೆಯನ್ನು ಪ್ರಜ್ಞಾಹೀನರನ್ನಾಗಿ ಮಾಡಿದೆ, ಪುರುಷಾರ್ಥ ವಿಹೀನರನ್ನಾಗಿ ಮಾಡಿದೆ. ಜನತೆ ತನ್ನ ಶಕ್ತಿಯನ್ನು ಅರಿತುಕೊಳ್ಳಬೇಕಿದೆ. ಅಭಿವೃದ್ಧಿಗಾಗಿ ಅಭಿವೃದ್ಧಿ ಎಂಬ ಸರ್ಕಾರದ ನೀತಿಯನ್ನು ಖಂಡಿಸಬೇಕು. ಇಂದಿನ ಕೇಂದ್ರ ಸರ್ಕಾರ ಮಾಡುತ್ತಿರುವ ಅನೇಕ ತಪ್ಪುಗಳಿಂದ ದೇಶದ ಜನತೆಯಲ್ಲಿ ಅಸಂತೋಷ ಮೂಡುತ್ತಿದೆ. ಆ ಅಸಂತೋಷವು ಉಲ್ಬಣಗೊಂಡು ಸ್ಫೋಟಗೊಳ್ಳುವ ಮೊದಲೇ ಸರ್ಕಾರವು ಎಚ್ಚತ್ತುಕೊಳ್ಳುವುದು ಒಳ್ಳೆಯದು.

ಪ್ರತಿಧ್ವನಿ

ದೇಶದಲ್ಲಿ ಬದಲಾವಣೆಯ ಸುಂಟರಗಾಳಿಯೆದ್ದಿದೆ. ಆ ಗಾಳಿಯಲ್ಲಿ ಅನೇಕ ಮೌಲ್ಯಗಳು ತರಗೆಲೆಯಂತೆ ಹಾರಿಹೋಗುವ ಸಂಭವ ಹೆಚ್ಚಿದೆ. ಬದಲಾವಣೆಗೊಳ್ಳುತ್ತಿರುವ ಯಾವುದೇ ವಿಷಯದ ಬಗ್ಗೆ ಜನಪದ ವಿಚಾರದ ಓದುಗರು ಪ್ರತಿಕ್ರಿಯಿಸಲು ಸಾಧ್ಯಮಾಡುವುದಕ್ಕೆ ಈ ಅಂಕಣವನ್ನು ಪ್ರಾರಂಭಿಸಲಾಗಿದೆ. ಬರಹ ಹದಿನೈದರಿಂದ ಇಪ್ಪತ್ತು ಸಾಲುಗಳಲ್ಲಿ ಇರಲಿ. ಜಾಗೃತ ಓದುಗರು ಈ ಅಂಕಣದ ಪ್ರಯೋಜನ ಪಡೆಯಬೇಕಾಗಿ ವಿನಂತಿ

– ಸಂಪಾದಕ

ಪೊರಕೆ, ಕ್ರಾಂತಿಯ ಪ್ರತೀಕದ ಚಿಹ್ನೆ. ಗುಡಿಸುವುದು ಫ್ಯಾಷನೆಬಲ್ ಇವೆಂಟ್ ಅಲ್ಲ

– ನ್ಯಾ.ಚಂದ್ರಶೇಖರ್ ಧರ್ಮಾಧಿಕಾರಿ

ಸ್ವಚ್ಛ ಭಾರತ ಅಭಿಯಾನ ಅಥವಾ ಸ್ವಚ್ಛತೆಯ ಕಾರ್ಯಕ್ರಮವನ್ನು ಸ್ವಾಗತಿಸಬೇಕು. ಆದರೆ ಇದು ಫ್ಯಾಷನೆಬಲ್ ಇವೆಂಟ್ ಅಲ್ಲ. ಅಂದರೆ ತೋರಿಕೆಯ ಸಂಗತಿಯಲ್ಲ. ಅದು ಪ್ರಾಯಶ್ಚಿತ್ತದ ಕಾರ್ಯಕ್ರಮ. ಪೊರಕೆ ಸಾಮಾಜಿಕ ವಿಷಮತೆ ಮತ್ತು ಜಾತಿ ಆಧಾರಿತ ಮೇಲು-ಕೀಳು ಭಾವನೆಯನ್ನು ಸಮಾಪ್ತಗೊಳಿಸುವ ಸಾಮಾಜಿಕ ಕ್ರಾಂತಿಯ ಪ್ರತೀಕವಾಗಿದೆ. ಕ್ರಾಂತಿಗೆ ಅಂಕಗಣಿತವಿರುವುದಿಲ್ಲ. 'ಪ್ರತೀಕ'ಗಳಿರುತ್ತವೆ. ಪೊರಕೆ ಸ್ವಚ್ಛತಾ ಕಾರ್ಯಕ್ರಮದ ಮೂಲಕ ಜಾತಿ ನಿವಾರಣೆಯ ಪ್ರತೀಕವಾಗಿದೆ. ಅದೇ ರೀತಿ ಅದು ವರ್ಗ ನಿರಾಕರಣೆಯ ಪ್ರತೀಕವೂ ಆಗಿದೆ. ದೇಶದ ಎಲ್ಲ ಜನರಲ್ಲಿ ಸಮರಸತೆ ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ನಿರ್ಮಾಣ ಮಾಡುವುದು ಅದರ ಉದ್ದೇಶವಾಗಿದೆ. ಧರ್ಮ, ಭಾಷೆ, ಪ್ರದೇಶ ಅಥವಾ ವರ್ಗ ಇತ್ಯಾದಿ ಸಂಗತಿಗಳನ್ನು ಆದರಿಸಿ ಉಂಟಾಗಿರುವ ಎಲ್ಲ ಭೇದಭಾವಗಳನ್ನೂ ಮೀರಿ ಐಕ್ಯತೆ ತರುವುದು ಆ ಕ್ರಾಂತಿಯ ಪ್ರತೀಕದ ಹಿಂದೆ ಇದ್ದ ಭಾವನೆಯಾಗಿತ್ತು. ಅದು ಕೇವಲ 'ಶ್ರಮದಾನ'ವೂ ಅಲ್ಲ, 'ಕ್ಯಾಂಡಲ್ ಮಾರ್ಚ'ವೂ ಅಲ್ಲ. ಕೈಯಲ್ಲಿ ಪೊರಕೆ ಹಿಡಿದು ಫೋಟೋ ತೆಗೆಸಿಕೊಂಡಾದ ಮೇಲೆ ಸ್ನಾನಮಾಡಿ ಹೊಟ್ಟೆತುಂಬ ನಾಸ್ತಮಾಡುವುದು ಕೆಲವರ ಧ್ಯೇಯವಾಗಿದೆ. ಕಸಗುಡಿಸುವ ಕೆಲಸಗಾರನಿಗೆ ಕುಡಿಯುವುದಕ್ಕಾಗಿ ಸ್ವಚ್ಛ ನೀರೂ ಹಣೆಬರಹದಲ್ಲಿಲ್ಲ. ಯಾರ ಮನಸ್ಸು ಸ್ವಚ್ಛವಾಗಿರುವುದಿಲ್ಲವೊ ಮತ್ತು ಯಾರ ಜೀವನ ಜಾತಿ ಆಧಾರಿತ ವರ್ಣಭೇದ ಮತ್ತು ಉಚ್ಚ – ನೀಚತೆ ಆಧಾರಿತ ವರ್ಗಭೇದದಿಂದ ಕಲುಶಿತವಾಗಿರುವುದೊ ಅಂತಹವರನ್ನು ಈ 'ಸ್ವಚ್ಛತಾ ಅಭಿಯಾನ' ಗಾಂಧೀಜಿಯವರ ವಿಚಾರಕ್ಕೆ ತಕ್ಕಂತೆ ಬದಲಾವಣೆ ಮಾಡದೇ ಹೋದರೆ ಈ ಅಭಿಯಾನದ ಹಿಂದಿರುವ ಭಾವನೆ ಲುಪ್ತವಾಗುವುದು.

ಇಂದು ನಮ್ಮ ಸಮಾಜದಲ್ಲಿ ಕಸ ಗುಡಿಸುವವರಿಗಿಂತ ಕಸ ಹಾಕುವ ಮತ್ತು ಕೊಳೆ ಮಾಡುವ ಉಚ್ಚ ವರ್ಣದ ಹಾಗೂ ಉಚ್ಚ ವರ್ಗದ ಜನರ ಪ್ರತಿಷ್ಠೆ ಹೆಚ್ಚಿದೆ. ಈ ವಿಸಂಗತಿ ಅಥವಾ ವಿರೋಧಾಭಾಸ ಸಮಾಪ್ತವಾಗಿ ಜಾತಿ ಆಧಾರಿತ ಸಾಮಾಜಿಕ ವಿಷಮತೆ ಎಲ್ಲಿಯವರೆಗೆ ಕೊನೆಗಾಣುವುದಿಲ್ಲವೊ

ಅಲ್ಲಿಯವರೆಗೆ ಈ ಅಭಿಯಾನ ಸಜೀವವೆನಿಸುವುದಿಲ್ಲ. ಈ ಅಭಿಯಾನದ 'ಎಕಲಾ ಚಲೋ ರೇ' ಎಂಬ ಘೋಷಣೆ ಕೂಡ ಸ್ವಾಗತ ಯೋಗ್ಯವಾಗಿದೆ. ಗಾಂಧೀಜಿ ವ್ಯಕ್ತಿಗತ ಚಾರಿತ್ರ್ಯ ಮತ್ತು ವ್ಯವಹಾರದ ಮೇಲೆ ಒತ್ತು ಕೊಡುತ್ತಿದ್ದರು. ಸ್ವಚ್ಛ ಭಾರತ ಮತ್ತು ಸ್ವಚ್ಛತೆಯಲ್ಲಿ ವಿಶ್ವಾಸ ಇಡುವವರು ಇದನ್ನು ಪ್ರಪ್ರಥಮವಾಗಿ ಅನ್ವಯಿಸಿಕೊಳ್ಳಬೇಕು. ಮತ್ತು ತಮ್ಮ ಸ್ವಂತ ಜೀವನದಲ್ಲಿ ಯಾವುದೇ ಪ್ರಕಾರದ ಭೇದಭಾವಕ್ಕೆ ಅವಕಾಶ ಕೊಡುಬಾರದು. "ನನ್ನ ಜೀವನವೇ ನನ್ನ ಸಂದೇಶ" ಎಂಬುದನ್ನು ಒಪ್ಪುವವರು ಗಾಂಧೀಜಿಯವರ ವಿಚಾರಧಾರೆ ಮತ್ತು ಜೀವನ ಪ್ರಣಾಲಿಯನ್ನು ವ್ಯಕ್ತಿಗತ ಹಾಗೂ ಸಾರ್ವಜನಿಕ ಜೀವನದಲ್ಲಿ ಪಾಲನೆ ಮಾಡುವರು. ಯಾವ ದೇವಸ್ಥಾನಗಳಲ್ಲಿ ಸ್ತ್ರೀಯರಿಗೆ ಮತ್ತು ದಲಿತರಿಗೆ ಪ್ರವೇಶವಿಲ್ಲವೊ ಆ ದೇವಸ್ಥಾನಗಳಿಗೆ ಹೋಗುವುದಿಲ್ಲ. ಯಾವ ವಿವಾಹ ಸಮಾರಂಭದಲ್ಲಿ ವಧು ಅಥವಾ ವರ ಹರಿಜನವಿರುತ್ತಿರಲಿಲ್ಲವೊ ಅಂಥ ಮದುವೆಗೆ ಗಾಂಧೀಜಿ ಹೋಗುತ್ತಿರಲಿಲ್ಲವೆಂಬುದನ್ನು ಹೇಗೆ ತಾನೆ ಮರೆಯಲು ಸಾಧ್ಯ. ಈ ಕಾರಣದಿಂದಾಗಿಯೇ ಮಹದೇವ್ ಬಾಯಿ ದೇಸಾಯಿಯುವರ ಪುತ್ರ ನಾರಾಯಣಬಾಯಿಯುವರ ಮದುವೆ ಸಮಾರಂಭದಲ್ಲಿ ಗಾಂಧೀಜಿ ಉಪಸ್ಥಿತರಿರಲಿಲ್ಲ. ಸ್ವಚ್ಛತಾ ಅಭಿಯಾನ ಹರಿಜನ ಸೇವೆಯ ಕಾರ್ಯಕ್ರಮವಾದಾಗ ಮಾತ್ರ 'ಮನಃಶುದ್ಧಿ' ಯಾಗುವುದು. ಸ್ವಚ್ಛ ಮನದಿಂದ ಸ್ವಚ್ಛತೆಯ ಅಭಿಯಾನದಲ್ಲಿ ಭಾಗವಹಿಸುವ ಅಧಿಕಾರ ಪ್ರಾಪ್ತವಾಗುವುದು. ಇದು ಅಭಿಯಾನದ ಮೊದಲ ಹೆಜ್ಜೆಯೆಂದು ಒಪ್ಪಲಾಗುವುದು. ಎಲ್ಲರ ಪಾಪವನ್ನೂ ತೊಳೆಯುತ್ತಾ - ತೊಳೆಯುತ್ತಾ ಗಂಗೆ ಕೂಡ ಮಲಿನವಾದಳು. ಸಾರ್ವಜನಿಕ ರಸ್ತೆ ಕಸ ಹಾಕಲು ಮತ್ತು ಗಲೀಜುಮಾಡಲು ಅವು ಎಲ್ಲರ ಅಪ್ಪನದಾಗಿದೆ. ಇಂದು ನಮ್ಮ 'ಮಾತೃಭೂಮಿ' ಅಥವಾ ಭಾರತದ್ದು ಇದೇ ಸ್ಥಿತಿಯಾಗಿದೆ. ಈ ಭಾವನೆ ಸ್ವಚ್ಛ ಆಗದ ಹೊರತು 'ಸ್ವಚ್ಛತಾ ಅಭಿಯಾನ' ವೆಂಬುದು ಔಪಚಾರಿಕವಾಗಿಯೇ ಉಳಿಯುವುದೆಂಬ ಸಂಶಯವಿದೆ ಮತ್ತು ಭಯವೂ ಇದೆ.

'ಹರಿಜನ' ಶಬ್ಧದ ಉಪಯೋಗವನ್ನು ಮಹಾತ್ಮಗಾಂಧೀಜಿಯವರಿಗಿಂತ ಮೊದಲೇ ನರಸಿ ಮೆಹತ ಕೂಡ ಮಾಡಿದ್ದಾರೆ. ಅವರು ನಾಗರ ಬ್ರಾಹ್ಮಣರಾಗಿದ್ದರು. ಹರಿಜನರೊಂದಿಗೆ ಅವರ ನಿಕಟತೆ ಇತ್ತು. ಜಾರ್ಖಂಡ್ ಮುಕ್ತಿ ಆಂದೋಲನದ ಮುಖಂಡರು ಸಂಸತ್ತಿನ ಸದಸ್ಯರು ಆದ ಶ್ರೀ.ಶೈಲೇಂದ್ರ ಮೆಹತೊ ಅವರ ಅನುಸಾರ ಹರಿಜನ ಶಬ್ಧದ ಸರ್ವಪ್ರಥಮ ಉಪಯೋಗ ಮಹರ್ಷಿ ವಾಲ್ಮೀಕಿ ಮಾಡಿದ್ದಾರೆ. ಅವರು ಸ್ವತಃ ಅಸ್ಪೃಶ್ಯರಾಗಿದ್ದರು. ಗಾಂಧೀಜಿ ಹರಿಜನ ಸೇವೆಯ ಕಾರ್ಯಕ್ರಮ ಪ್ರಾರಂಭಿಸಿದ್ದರು. ಒಬ್ಬನ ಉದ್ಧಾರ ಬೇರೊಬ್ಬನು ಮಾಡಲಾರ.

ಸ್ವಯಂ ತಿನ್ನದ ಹೊರತು ಹೊಟ್ಟೆ ತುಂಬುವುದಿಲ್ಲ. ಸ್ವಯಂ ಸಾಯದೆ ಸ್ವರ್ಗ ಕಾಣಿಸುವುದಿಲ್ಲ ಎಂಬುದನ್ನು ಗಾಂಧೀಜಿ ತಿಳಿದಿದ್ದರು. ಅವರ ಹರಿಜನ ಸೇವೆಯ ಕಾರ್ಯಕ್ರಮ ಸವರ್ಣೀಯರನ್ನು ಉದ್ಧಾರಮಾಡುವುದಕ್ಕಾಗಿತ್ತು. ಪೊರಕೆಯ ಮಾಧ್ಯಮದ ಮೂಲಕ ಶೌಚಾಲಯದ ಸ್ವಚ್ಛತೆಯ ಕಾರ್ಯವನ್ನು ಪ್ರತಿದಿನ ಸ್ವತಃ ಅವರೇ ಮತ್ತು ಆಶ್ರಮವಾಸಿಗಳೂ ಮಾಡುತ್ತಿದ್ದರು. ಶತಮಾನಗಳಿಂದ ಸಮಾಜದ ಒಂದು ವರ್ಗವನ್ನು ಅಸ್ಪೃಶ್ಯವೆಂದು ತಿಳಿದಿದ್ದ ಸವರ್ಣೀಯರು ಪ್ರಾಯಶ್ಚಿತ್ತದ ರೂಪದಲ್ಲಿ ಹರಿಜನ ಸೇವೆಮಾಡಬೇಕು. ಹರಿಜನ ವಾಸ್ತವದಲ್ಲಿ ದೇವರ ಮಕ್ಕಳು. ಆನರಿಗೆ ಸುಖ, ಶಾಂತಿ ಸಿಗಲಿ ಮತ್ತು ಅವರು ಸ್ವಚ್ಛ ಹಾಗೂ ಸ್ವಸ್ಥ ಜೀವನ ನಡೆಸುವಂತಾಗಲಿ ಎಂಬುದಕ್ಕಾಗಿ ಅಸ್ಪೃಶ್ಯರು ತಮ್ಮ ಕೈಗಳನ್ನು ಮತ್ತು ದೇಹವನ್ನು ಮಲಿನ ಮಾಡಿಕೊಳ್ಳುತ್ತಾರೆ. ಅಸ್ಪೃಶ್ಯರು ಒಂದು ವೇಳೆ ಸ್ವಚ್ಛತಾ ಕೆಲಸವನ್ನು ಮಾಡದಿದ್ದರೆ ಮೇಲ್ವರ್ಗದವರು ಸ್ವಚ್ಛ ಜೀವನ ಹೇಗೆ ನಡೆಸಲು ಸಾಧ್ಯ? ಅವರ ಸ್ವಚ್ಛ ಮತ್ತು ಪವಿತ್ರ ಜೀವನ ಅಸ್ಪೃಶ್ಯರದೇ ಕಾಣಿಕೆ. ಪೌರ ಕಾರ್ಮಿಕರ ಕೈಯಲ್ಲಿ ಭಗವದ್ಗೀತೆ ಮತ್ತು ಮೇಲ್ವರ್ಗದವರ ಕೈಯಲ್ಲಿ ಪೊರಕೆ ಬಂದಾಗ ಮಾತ್ರ ಅಸ್ಪೃಶ್ಯತೆ ಅಳಿಸಿಹೋಗಿ ಸಾಮಾಜಿಕ ಸಮಾನತೆ ನಿರ್ಮಾಣವಾಗುವುದು. ಒಂದು ವೇಳೆ ಹರಿಜನರು ದೇವರ ಮಕ್ಕಳಾದರೆ ಉಳಿದವರೆಲ್ಲಾ ದುರ್ಜನರ ಅಥವಾ ಸೈತಾನನ ಮಕ್ಕಳೇ? ಈ ಪ್ರಶ್ನೆಯನ್ನು ಎತ್ತಿದಾಗ "ಮೇಲ್ವರ್ಗದ ಹಿಂದೂಗಳು ಆತ್ಮಸಾಕ್ಷಿಯಾಗಿ ಹಾಗೂ ಸ್ವಯಂ ಪ್ರೇರಣೆಯಿಂದ ಅಸ್ಪೃಶ್ಯತೆಯ ಆಚರಣೆಯಿಂದ ಯಾವಾಗ ಮುಕ್ತರಾಗುವರೊ ಆಗ ಎಲ್ಲ ಮೇಲ್ಜಾತಿಯವರು ಹರಿಜನರ ರೂಪದಲ್ಲಿ ಗುರುತಿಸಲ್ಪಡುವರು. ಏಕೆಂದರೆ ಆಗ ಎಲ್ಲರ ಮೇಲೆ ದೇವರ ಕೃಪೆಯಾಗುವುದು. ಈ ರೀತಿ ಇತ್ತು ಗಾಂಧೀಜಿಯವರ ವಿಚಾರ. ಇದು ಸ್ವಚ್ಛ ಭಾರತ ಅಭಿಯಾನದ ಭೂಮಿಕೆಯಾಗಿದೆ ಅಥವಾ ಆಗಬೇಕು.

ಹಿಂದಿಯಿಂದ ಅನು : ಸುಕೌ
ಸಾಭಾರ : ಸರ್ವೋದಯ ಜಗತ್

ಸನಾತನ ಭಾರತದ ಸದಾತನ ಸಾಹಿತ್ಯ

– ವಿದ್ವಾನ್ ಉಮಾಕಾಂತ ಭಟ್ಟ

ನಮ್ಮ ದೇಶ ಭಾರತ. ನಮ್ಮ ಇತಿಹಾಸ ಭಾರತ. ನಮ್ಮ ಸಂತತಿ 'ಭಾರತೀ', ನಮ್ಮ ಸಾಹಿತ್ಯ 'ಭಾರತೀಯ'. ನಮ್ಮ ದೇಶ ಇಂದು ನಿನ್ನೆಯದಲ್ಲ. ಇದಕ್ಕೆ ಸಾವಿರಾರು ವರ್ಷಗಳ ದೀರ್ಘಕಾಲದ ಇತಿಹಾಸವಿದೆ. ಉಜ್ವಲವಾದ ಪರಂಪರೆಯಿದೆ. ಇದು ಹಿಂದೆಯೂ ಇತ್ತು; ಇಂದೂ ಇದೆ; ಮುಂದೂ ಮುಂದುವರಿಯುವುದು. ಕಾಲವು ಕಳೆದಂತೆ ದೇಶದ ಎಲ್ಲೆಗಳು ಚೆಲ್ಲಾಡಿರಬಹುದು. ಅಧಿಕಾರ – ಸ್ವಾಮ್ಯಗಳು ಬದಲಾಗಿರಬಹುದು. ಜನರ ಜೀವನಶೈಲಿ, ಆಶೋತ್ತರಗಳು ಪರಿವರ್ತಿತವಾಗಿರಬಹುದು. ಸಮುದಾಯ ಏಳು – ಬೀಳುಗಳನ್ನು ಕಂಡಿರಬಹುದು. ಆದರೂ ಈ ದೇಶ ಇಂದಿಗೂ ವಿಶ್ವದಲ್ಲಿ ತಲೆಯೆತ್ತಿ ನಿಂತಿದೆ. ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದೆ. ಈಗಲೂ ಇದನ್ನು 'ಭಾರತ' ಎಂದೇ ಗುರುತಿಸುತ್ತಾರಷ್ಟೇ! ಭೌತಿಕವಾಗಿ ಬದಲಾವಣೆಗಳಾಗಲಿ, ಬೌದ್ಧಿಕವಾಗಿ ಪಲ್ಲಟವಾಗಲಿ, ಭಾವನಾತ್ಮಕವಾದ ಪರಿವರ್ತನೆಯಾಗಲಿ ಭರತಖಂಡದ, ಭಾರತವರ್ಷದ, ಭಾರತದೇಶದ ಸಂಸ್ಕಾರಗಳ ಒಳಹರಿವನ್ನು ಪೂರ್ಣವಾಗಿ ತಡೆಯಲು ಶಕ್ತವಾಗಿಲ್ಲ; ತೊಡೆದು ಹಾಕಲು ಸಮರ್ಥವಾಗಿಲ್ಲ. ಆದುದರಿಂದ ನಮ್ಮ ದೇಶ ಸೊರಗಿದರೂ ಬರಡಾಗಲಿಲ್ಲ. ಮರುಗಿದರೂ ಮರೆಯಾಗಲಿಲ್ಲ. ನಮ್ಮ ಪೂರ್ವಜರು ಭಾ–ರತರು. ಅವರು ಬೆಳಕನ್ನು ಪ್ರೀತಿಸಿದವರು. ಕತ್ತಲೆಯನ್ನು ದ್ವೇಷಮಾಡದೆ ಕತ್ತಲೆಯಿಂದ ಹೊರಬಂದವರು. ಅವರು ಬೆಳಕಿನಿಂದ ಬಾಳಿದರು, ಬೆಳಕನ್ನು ಬಾಳಿದರು. ಅಂದು ಭಾರತೀಯರಿಗೆ ಬಾಳು ಬೇಕಾಗಿತ್ತು; ಬೆಳಕು ಬಾಳಾಗಿತ್ತು. ಆದುದರಿಂದ ಅವರು ಇಹವನ್ನು ಮರೆಸಲಿಲ್ಲ; ಪರವನ್ನು ಮರೆಯಲಿಲ್ಲ. ಇಹ–ಪರಗಳೆರಡರಲ್ಲೂ ಹುರುಪಿನಿಂದ ಬಾಳಿ, ಬೆಳಕಾಗಿ ಬೆಳೆದು ನಿಂದರು; ಋಷಿಗಳಾದರು; ಮುನಿಗಳಾದರು. ಅವರು ಸತ್ಯವನ್ನೇ ಕಂಡರು. ಕಂಡಂತೆಯೇ ನುಡಿದರು, ನುಡಿದಂತೆ ನಡೆದರು. ನಡೆದಂತೆ ದುಡಿದರು, ದುಡಿದಂತೆ ಮಡಿದರು. ಆದುದರಿಂದ ಅವರ ಜೀವನ ಸತ್ಯಜೀವನ, ನಿತ್ಯಜೀವನ, ಸ್ತುತ್ಯಜೀವನ.

ಭಾರತದಲ್ಲಿ ಹುಟ್ಟಿದವರು ಭಾರತೀಯರು. ಅವರು 'ಭಾರತೀ' ಸಂತತಿಗೆ ಸೇರಿದವರು. ಇಲ್ಲಿಗೆ ಬಂದು ನೆಲೆಸಿದವರು ಭಾರತೀಯ ಪೌರರಾಗಬಹುದೇ

ಹೊರತು ಭಾರತೀಯರಾಗಲಾರರು. ಭಾರತೀಯತೆಯ ಅಂಟು ಬೇರೆ; ನಂಟು ಬೇರೆ. ಭಾರತೀಸಂತತಿ ವಿಶ್ವದ ಯೋಗ – ಕ್ಷೇಮಗಳನ್ನು ಹೊರಬಲ್ಲ ಸಂಸ್ಕಾರವಂತ ಸಂತತಿ. ಭೋಗದಲ್ಲಿ ಸಂಯಮವನ್ನೂ, ಯೋಗದಲ್ಲಿ ಮಾಂಗಲ್ಯವನ್ನೂ ಕಂಡರಸಿದ ಸಂತತಿ. ಧರ್ಮದ ಮೂಲ – ಚೂಲಗಳನ್ನು ಹುಡುಕಿ ಆರಾಧಿಸಿದ ವಂಶವಾಹಿನಿ. ಈ ಸಂತತಿಯ ಹಿರಿಯರು ವಿಶ್ವಕ್ಕೆ ಆದರ್ಶಪ್ರಾಯರಾಗಿದ್ದರು. ಇದಕ್ಕೆ ವಿಷ್ಣುಪುರಾಣದಲ್ಲಿಯೂ ಮನುಸ್ಮೃತಿಯಲ್ಲಿಯೂ ಉಲ್ಲಿಖಿತವಾದ ಈ ಶ್ಲೋಕವೇ ಸಾಕ್ಷಿ –

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ॥

ಈ ದೇಶದಲ್ಲಿ ಹುಟ್ಟಿರುವ ಹಿರಿಯರ ಬಳಿಯಲ್ಲಿ ಭೂಮಂಡಲದ ಎಲ್ಲ ಮಾನವರೂ ತಮ್ಮ ತಮ್ಮ ಚರ್ಯೆಗಳನ್ನು ಕಲಿಯುತ್ತಾರೆ – ಎಂಬುದು ಶ್ಲೋಕಾರ್ಥ. ಚರಿತ್ರ ಎಂದರೆ ಆಚಾರ – ನಡೆ – ವರ್ತನೆ. ಮಾನವನು ಇತರ ಪ್ರಾಣಿಗಳಂತೆ ಹಸಿವೆ, ನಿದ್ದೆ ಮೊದಲಾದ ವೇಗಗಳಿಗೆ ಅಧೀನವಾಗಿಯೇ ನಡೆದುಕೊಳ್ಳುತ್ತಾನಷ್ಟೆ!. ಆದರೆ ವಿವೇಕಿಯಾದವನು ತನ್ನ ವೇಗಗಳನ್ನು ನಿಯಂತ್ರಿಸಿಕೊಂಡು ತನ್ನ ನಡೆಯನ್ನು ವಿಶ್ವದ ಗತಿಯೊಂದಿಗೆ ಹೊಂದಿಸಿಕೊಳ್ಳುತ್ತಾನೆ. ವಿಶ್ವಸೃಷ್ಟಿಗೆ ವಿರೋಧವಿಲ್ಲದಂತೆ ತನ್ನ ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾನೆ. ಅವನ ಪ್ರವೃತ್ತಿಗಳು ಪಂಚಭೂತಗಳ ಸ್ಥೂಲ – ಸೂಕ್ಷ್ಮವಾದ ಗತಿಗಳಿಗೆ ಅನುಗುಣವಾಗಿಯೆ ಹುಟ್ಟಿಕೊಳ್ಳುತ್ತವೆ. ಇಂಥಹ ನಿಸರ್ಗನಿಕಟವಾದ ಚರಿತ್ರವು ಭಾರತವರ್ಷದ ಹಿರಿಯರಲ್ಲಿ ಬೆಳೆದುಬಂದಿತ್ತು. ಅದನ್ನು ಪ್ರಪಂಚದ ಎಲ್ಲೆಡೆಯ ಮಾನವರು ಆದರ್ಶವೆಂದು ಭಾವಿಸಿ, ಧಾವಿಸಿ ಕಲಿತು, ಆಚರಿಸುತ್ತಿದ್ದರು.

ಇಂಥ ಭಾರತೀಸಂತತಿಯು ಈ ಭಾರತವರ್ಷದಲ್ಲಿಯೇ ಬೆಳೆಯಲು ಅನೇಕ ಕಾರಣಗಳಿವೆ. ಭರತಖಂಡವೇ ಒಂದು ಆಶ್ಚರ್ಯಕರವಾದ ಭೂಭಾಗ. ಭಾರತ ಭೂಮಿ ಭೋಗಭೂಮಿಯಲ್ಲ. ಕರ್ಮಭೂಮಿ – ದೇವಭೂಮಿ. ಭೋಗಿಗಳೂ ಅರಸಿ ಬರುವ ಯೋಗಭೂಮಿ. ಭೂಮಂಡಲದ ಮಾನದಂಡವಾದ ಹಿಮಾಲಯದ ದಕ್ಷಿಣಕ್ಕೆ, ಅಗಾಧವಾದ ಗಾಂಭೀರ್ಯದಿಂದ ಕೂಡಿರುವ ದಕ್ಷಿಣ ಸಮುದ್ರದ ಎತ್ತರಕ್ಕೆ ಚಾಚಿಕೊಂಡಿರುವ ಈ ಭೂಮಿಯಲ್ಲಿ ಅವೆಷ್ಟು ಪವಿತ್ರವಾದ ಜೀವನದಿಗಳು ಹರಿಯುತ್ತಿವೆ! ಅವೆಷ್ಟು ಕುಲಾಚಲಗಳು ಗಗನದೆತ್ತರಕ್ಕೆ ಉಬ್ಬಿ ನಿಂತಿವೆ! ಅವೆಷ್ಟು ಗಹನವಾದ ವನಕಾನನಗಳು ಹರಡಿಕೊಂಡಿವೆ! ಅವೆಷ್ಟು ಪುಣ್ಯಧಾಮಗಳು – ತೀರ್ಥ ಕ್ಷೇತ್ರಗಳು ಮೆಯ್ದಾಳಿ ನಿಂತಿವೆ! ದೇವತೆಗಳೇ

ಹಾಡಿ, ನಲಿದಾಡುವ ಭಾಗ್ಯವಂತ ಭೂಮಿಯಿದು –

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದವಾರ್ಗಭೂತೇ
ಭವಂತಿ ಭೂಯಃ ಪುರುಷಾಃ ಸುರತ್ವಾತ್॥

ಸ್ವರ್ಗ ಮತ್ತು ಅಪವರ್ಗಗಳಿಗೆ ಮಹಾಮಾರ್ಗ ಈ ಭಾರತವರ್ಷ. ಪುಣ್ಯದ ರಾಶಿಯು ವ್ಯಯವಾಗಿರಲು ದೇವತೆಗಳು ಭೂಮಿಯಲ್ಲಿ ಮತ್ತೆ ಹುಟ್ಟಿ ಸದ್ಗತಿಯನ್ನು ಪಡೆಯುತ್ತಾರೆ. ಆ ಮೂಲಕ ಧನ್ಯರಾಗುತ್ತಾರೆ. ಆದ್ದರಿಂದ ಇದು ದೇವತಾ ಯೋಗ್ಯವಾದ ದೇಶವೆಂಬುದರಲ್ಲಿ ಸಂದೇಹವೇನಿದೆ? ಇಲ್ಲಿಯ ಸಂತತಿಯಲ್ಲಿ ದೇವಮಾನವ ಸಂಬಂಧವು ಹಾಸುಹೊಕ್ಕಾಗಿದೆ.

ಇಂಥ 'ಭಾರತೀ' ಸಂತತಿಯ ಶ್ರೇಯಸ್ಸು – ಪ್ರೇಯಸ್ಸುಗಳಿಗಾಗಿ ಈ ದೇಶದ ಋಷಿಗಳು ತಮ್ಮ ಅಸೀಮತಪಸ್ಸಿನಿಂದ ಪಡೆದ ಸಾಹಿತ್ಯ ಸನಾತನ ಸಾಹಿತ್ಯ. ಆರ್ಷಪ್ರಜ್ಞೆಯಿಂದ ಬೆಳೆಸಿ ಬೆಳಗಿಸಿದ ಭಾರತದ ಪ್ರಾಚೀನಸಾಹಿತ್ಯ ಈ ಸನಾತನ ಸಾಹಿತ್ಯ.

'ಸಾಹಿತ್ಯ' ಎಂದರೆ ವಾಙ್ಮಯ. ಸನಾತನ ಭಾರತದ ಐಹಿಕ – ಆಯುಷ್ಮಿಕ ಜೀವನದ ಪ್ರತಿಬಿಂಬ ನಮ್ಮ ಸಾಹಿತ್ಯ. ಸಮುದಾಯ ಜೀವನವನ್ನು ಅಭ್ಯುದಯಕ್ಕೆ ಕೊಂಡೊಯ್ಯುವ ಶಬ್ದಾರ್ಥಸೇತು ಇದು. ಸಾಹಿತ್ಯ ಎಂದರೆ ಸಾಂಗತ್ಯ. ಇದು ಶಬ್ದಾರ್ಥಗಳ ಮೈತ್ರಿ. 'ಸಹಿತಯೋರ್ಭಾವಃ ಸಾಹಿತ್ಯಮ್'. ಶಬ್ದವು ಅರ್ಥಸಹಿತವಾಗಿದೆ; ಅರ್ಥವು ಶಬ್ದಸಹಿತವಾಗಿರುತ್ತದೆ. ಅವೆರಡೂ ಒಂದನ್ನೊಂದು ಬಿಟ್ಟಿರಲಾರವು. ಅರ್ಥಬೋಧವನ್ನು ಉಂಟುಮಾಡುವ ಸಲುವಾಗಿಯೇ ಶಬ್ದವೂ ಹುಟ್ಟಿಕೊಂಡಿದೆ. ಆದುದರಿಂದ ಅರ್ಥಬೋಧಕತ್ವವು ಶಬ್ದದ ಸ್ವರೂಪದಲ್ಲಿಯೇ ಸೇರಿಕೊಂಡಿತು. ಅರ್ಥಜ್ಞಾನವು ಶಬ್ದದ ಸಂಬಂಧವಿಲ್ಲದೆ ಪೂರ್ಣವೆನಿಸದು. ಹಾಗಾಗಿ ಶಬ್ದವೂ ಅರ್ಥದ ಒಂದಂಶವೆಂದೇ ಆಯಿತು. ಹೀಗೆ ಶಬ್ದಾರ್ಥಗಳು ಅನ್ಯೋನ್ಯಸಹಿತವಾಗಿ ಅವಿನಾಭೂತವಾಗಿ ಇರುವುದರಿಂದ ಅವುಗಳ ಸಂಬಂಧಕ್ಕೆ 'ಸಾಹಿತ್ಯ' ಎಂಬ ಹೆಸರು ಸಾರ್ಥಕವಾಗಿ ಬಂತು. ಹೀಗೆ ಈ ಸಂಬಂಧವನ್ನು ಪುರಸ್ಕರಿಸಿದ ಶಬ್ದರಾಶಿಯೂ, ಅರ್ಥಸಮುದಾಯವೂ ಸಾಹಿತ್ಯವೇ. ಆದುದರಿಂದಲೇ ನಾವು ಸಾಹಿತ್ಯವನ್ನು ಓದುತ್ತೇವೆ ಮತ್ತು ಅನುಭವಿಸಿ ಆನಂದಿಸುತ್ತೇವೆ.

ಶಬ್ದ ಮತ್ತು ಅರ್ಥಗಳ ಸಂಬಂಧ ಬಹಳ ಗಾಢ ಮತ್ತು ಗೂಢ.

ಅದನ್ನು ಸುಲಭವಾಗಿ ಅರಿಯಲಾಗದು. ಅದು ಸತಿಪತಿಗಳ ದಾಂಪತ್ಯದಂತೆ ಪ್ರಸನ್ನ, ಗಂಭೀರ ಮತ್ತೂ ಪವಿತ್ರ. ಸತಿಯ ಜೀವಿತವು ಪತಿಯಲ್ಲಿ, ಪತಿಯ ಜೀವಿತವು ಸತಿಯಲ್ಲಿ ಇರುವಂತೆ ವಾಕ್ಕಿನ ಪ್ರಾಣವು ಅರ್ಥದಲ್ಲಿಯೂ, ಅರ್ಥದ ಪ್ರಾಣವು ವಾಕ್ಕಿನಲ್ಲಿಯೂ ಇದೆ. ಮಹಾಕವಿ ಕಾಳಿದಾಸನು ಕಂಡ 'ವಾಗರ್ಥಸಂಪರ್ಕ' ಇನ್ನೂ ಸೂಕ್ಷ್ಮ; ಇನ್ನೂ ನೈಸರ್ಗಿಕ.

ವಾಗಾರ್ಥವಿವ ಸಂಪೃಕ್ತೌ ವಾಗಾರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ॥

ಪಾರ್ವತೀಪರಮೇಶ್ವರರು ವಾಗಾರ್ಥಗಳಂತೆ 'ಸಂಪೃಕ್ತ' ರಾಗಿದ್ದಾರೆ. ವಾಗಾರ್ಥಗಳು ಪಾರ್ವತೀಪರಮೇಶ್ವರರಂತೆ ಸಂಪೃಕ್ತವಾಗಿವೆ. ಪಾರ್ವತೀಪರಮೇಶ್ವರರು ಪ್ರಕೃತಿಪುರುಷರಾಗಿ ಈ ಪ್ರಪಂಚವನ್ನು ಹಡೆದವರು - ಪಾಲಿಸಿದವರು. ಆದುದರಿಂದ ಅವರು ಈ ಜಗತ್ತಿನ ತಾಯಿತಂದೆಯರಾದವರು. ವಾಗಾರ್ಥಗಳು ಅವರು ಸೃಷ್ಟಿಸಿದ ಈ ಪ್ರಪಂಚವನ್ನು ವಿಸ್ತಾರಮಾಡುತ್ತಿವೆ. ಲೋಕಯಾತ್ರೆಯನ್ನು ಮುಂದುವರಿಸುತ್ತಿವೆ. ಆದುದರಿಂದ ಅವುಗಳ ಮೇಲೆ ಜಗತ್ತಿನ ತಂದೆತಾಯಿಯರ ಹೊಣೆಯು ಬಂದಿದೆ. ಪರಮೇಶ್ವರನ ಎಡಭಾಗ ಪಾರ್ವತಿ. ಪಾರ್ವತಿಯ ಬಲಭಾಗ ಪರಮೇಶ್ವರ. ಅರ್ಧನಾರೀಶ್ವರಮೂರ್ತಿಯಲ್ಲಿ ಅವರಿಬ್ಬರೂ ಅರ್ಧಅರ್ಧವಾಗಿ ಸೇರಿಕೊಂಡೇ ದಂಪತಿಗಳಾದರು. ಶಿವಶಿವೆಯರಂತೆ ವಾಗಾರ್ಥಗಳೂ ನಮ್ಮ ಪ್ರಕೃತಿಯಲ್ಲಿ ಅರ್ಧಾರ್ಧವನ್ನು ಹಂಚಿಕೊಂಡೇ ಇರುತ್ತವೆ. ದ್ವಿದಳಧಾನ್ಯದ ಎರಡು ದಳಗಳಂತೆ ಅವು. ಹೊರಗಿನ ಕವಚವು ಇರುವವರೆಗೆ ಧಾನ್ಯ ಒಂದೇ. ಆದರೆ ಕವಚದ ಒಳಗಡೆ ಎರಡು ದಳಗಳು! ಅದರಲ್ಲೂ ಅವು ಎದುರು ಬದುರು ಒಂದನ್ನೊಂದು ಅಪ್ಪಿಕೊಂಡು ಇರುತ್ತವೆ! ಹೊರಗಿನ ಸಿಪ್ಪೆಯ ಕವಚವು ಅವುಗಳನ್ನು ಒಂದುಗೂಡಿಸಿದ್ದರೆ ಮಾತ್ರ ಧಾನ್ಯವು ಮೊಳೆಯಲು ಸಾಧ್ಯ. ಇದೇ ರೀತಿ ವಾಕ್ ಮತ್ತು ಅರ್ಥಗಳು ತಮ್ಮ ಸ್ನೇಹ (ಸಾಹಿತ್ಯ) ವನ್ನು ಕಳೆದುಕೊಳ್ಳದಿದ್ದರೆ ಮಾತ್ರ ಜೀವರ ಜೀವನಯಾತ್ರೆ ವಿಕಾರವಾಗದೆ ಸುಗಮವಾಗುತ್ತದೆ; ಸುಖಮಯವಾಗುತ್ತದೆ. ಇಂಥ ಸಾಹಿತ್ಯವನ್ನು ಅರಿತು, ಆನಂದಿಸಿ, ಉಳಿಸಿ ಬೆಳಗಿಸುವುದು ಆರ್ಯ ಮಹರ್ಷಿಗಳ ದೃಷ್ಟಿಯಾಗಿದೆ; ಕೈಂಕರ್ಯರೂಪದ ಸೃಷ್ಟಿಯಾಗಿದೆ.

ಸಾಹಿತ್ಯ ಎಂಬ ಪದಕ್ಕೆ ಹಿತಸಂಬಂಧ ಮತ್ತು ವಿಹಿತಸಂಬಂಧ ಎಂಬ ಅರ್ಥಗಳೂ ಸಂಗತವೆನಿಸುತ್ತವೆ. ಕಾರಣ, ಹಿತೇನ ಸಹಿತಃ ಸಹಿತಃ, ತಸ್ಯಭಾವಃ ಸಾಹಿತ್ಯಮ್' - ಎಂಬ ನಿಷ್ಪತ್ತಿಯನ್ನೂ ಸ್ಮರಿಸಬಹುದಷ್ಟೆ! ಆದುದರಿಂದ ಸಾಹಿತ್ಯವು

ಸಮಾಜದ ಸಾಹಿತ್ಯವನ್ನೂ ಸೌಹಿತ್ಯವನ್ನೂ ಸಂಪಾದಿಸಿಕೊಡುವಂತಿರಬೇಕು. ಇದಕ್ಕಾಗಿ ವಾಕ್ ಅರ್ಥವನ್ನು ಸನುಸರಿಸಬಹುದು ಅಥವಾ ಅರ್ಥವೇ ವಾಕ್ಕನ್ನು ಅನುಸರಿಸಿ ಓಡಿಬರಬಹುದು. ಭವಭೂತಿಯ ದರ್ಶನವಿಭೂತಿ ಹೀಗಿದೆ ತಾನೇ!

ಲೌಕಿಕಾನಾಂ ಹಿ ಸಾಧೂನಾಮರ್ಥಂ ವಾಗನುವರ್ತತೇ ।

ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ ॥

ಸಾಹಿತ್ಯಶಬ್ದದ ಎಲ್ಲ ರೀತಿಯ ವ್ಯುತ್ಪತ್ತಿನಿಮಿತ್ತಗಳೂ ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಗೋಚರಿಸುತ್ತಿರುವುದು ಸಹಜವೇ ಆಗಿದೆ. ಕಾರಣವೇನೆಂದರೆ ಸಾಹಿತ್ಯ ಎಂಬ ಪದವನ್ನೂ ಈ ಸಾಹಿತ್ಯವೇ ಕಾಣಿಕೆಯಾಗಿ ನೀಡಿದೆಯಷ್ಟೇ!

ಸದಾತನಭಾರತದ ಸನಾತನಸಾಹಿತ್ಯವು ಅತ್ಯಂತ ವ್ಯಾಪಕವಾಗಿದೆ. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದದ ಸಾವಿರಾರು ಶಾಖೆಗಳು; ರಾಮಾಯಣ ಮತ್ತು ಮಹಾಭಾರತಗಳು; ಶ್ರೀಮದ್ಭಾಗವತ ಮತ್ತು ಹರಿವಂಶಗಳು; ಅಷ್ಟಾದಶ ಮಹಾಪುರಾಣಗಳು ಮತ್ತು ಉಪಪುರಾಣಗಳು; ಸೂತ್ರವಾಙ್ಮಯ, ಶಾಸ್ತ್ರಗ್ರಂಥಗಳು, ಸ್ಮೃತಿಗ್ರಂಥಗಳು, ಕಾವ್ಯನಾಟಕಾದಿಗಳು, ಹೀಗೆ ಅಸಂಖ್ಯೇಯ ಗ್ರಂಥಗಳು ಭಾರತೀಯ ಸಾಹಿತ್ಯಸೌಧವನ್ನು ನಿರ್ಮಿಸುವ ಪರಿಕರಗಳಾಗಿವೆ. ಇವೆಲ್ಲವೂ ಜೀವ ಸಂಸ್ಕಾರಕ್ಕಾಗಿಯೇ ಉದಿಸಿಬಂದ ಶಬ್ದಾರ್ಥಸಮುಚ್ಚಯಗಳು; ವಿವೇಕಿಗಳಾದ ಮಾನವರ 'ಕಾರ್ಯಾಕಾರ್ಯವ್ಯವಸ್ಥೆ'ಗಾಗಿ ಸಿದ್ಧವಾದ ಪ್ರಮಾಣ ಪದ್ಧತಿಗಳು. ಇವು ಬಿಡುವಿನ ವೇಳೆಯಲ್ಲಿ ಕಟ್ಟಿದ ಮಾತುಗಳಲ್ಲ. ಸಮಾಧಿಸ್ಥಿತಿಯಲ್ಲಿ ಹೊಳೆದುಬಂದ, ತಾವೇ ತಾವಾಗಿ ಹುಟ್ಟಿದ ಮತುಗಳು; ಋಷಿಗಳು ಕಂಡ ಸತ್ಯವೇ ತನ್ನನ್ನು ಪರಿಚಯಿಸಿಕೊಳ್ಳಲು ಬಳಸಿಕೊಂಡ ಉಡುಗೆಗಳಿವು – ಕವಚಗಳಿವು. ಆದುದರಿಂದ ಈ ಸತ್ಯಸಾಹಿತ್ಯ ನಿತ್ಯ – ಅಮೃತ. ವೇದವೇ ಬಾಯ್ದೆರೆಯಾಗಿ ಹೇಳುವಂತೆ –

ಋಚಃ ಸಾಮಾನಿ ಯಜೂಂಷಿ । ಸಾ ಹಿ ಶ್ರೀರಮೃತಾ ಸತಾಮ್ ॥

ಋಗ್ವೇದ, ಯಜುರ್ವೇದ, ಸಾಮವೇದಗಳು ಸಜ್ಜನರ ಅಮೃತವಾದ ಸಂಪತ್ತು – ಅಮರವಾದ ನಿಧಿ. ಅವು ಮೀಮಾಂಸಕರ ಅಭಿಪ್ರಾಯದಂತೆ ಅಪೌರುಷೇಯವಾಗಲಿ, ತಾರ್ಕಿಕರ ಅಭಿಮತದಂತೆ ಪರಮೇಶ್ವರನೆಂಬ ಪರಮಾಪ್ತನಿಂದ ಪ್ರಣೀತವಾಗಿರಲಿ; ನಿತ್ಯವೂ, ನಿರ್ದುಷ್ಟವೂ ಪ್ರಮಾಣವೂ ಆಗಿವೆ ಎಂಬ ವಿಷಯದಲ್ಲಿ ಸಂದೇಹವಿಲ್ಲ. ಅವುಗಳಿಂದಲೇ ಗುಟುಕು ಪಡೆದು, ಅವುಗಳನ್ನೇ ಉಪಜೀವಿಸಿ ಬೆಳೆದ ಮುಂದಿನ ಸಾಹಿತ್ಯಸಾಗರವು ಆರ್ಷಪ್ರಜ್ಞೆಯ ವಿಸ್ತಾರವೇ ಆಗಿರುವುದರಿಂದ ನಮಗೆ ಪರಮಾಪ್ತ ಸಾಹಿತ್ಯವಾಗಿದೆ. ಭಾರತೀಯ

ಸಾಹಿತ್ಯದ ಜೀವಾತು ಈಶ್ವರ ಸಂಬಂಧದಿಂದ ಉಂಟಾದ ಈ ಬಗೆಯ 'ಆಪ್ತತೆ'. ಆಪ್ತವಾಕ್ಯ ಲೋಕಕ್ಕೇ ಆಪ್ಯಾಯನ, ಹಿತ, ವಿಹಿತ.

ವೇದಗಳ ತಪಸ್ವಿಗಳಾದ ಋಷಿಗಳ ಹೃದಯದಲ್ಲಿ ನೆಲೆಸಿವೆ. ಅವರ ಯೋಗ ಸಾಧನೆಯಿಂದ ಆವು ಅಲ್ಲಿಂದಲೇ ಹೊರಗೆ ಪ್ರಕಾಶಿತವಾಗುತ್ತವೆ. ಉಪದೇಶ ಪರಂಪರೆಯ ಮೂಲಕ ಪ್ರಪಂಚದಲ್ಲಿ ಬೆಲಗುತ್ತವೆ. ಮುಂದಿನ ತಲೆಮೊರೆಯ ತಪಸ್ವಿಗಳನ್ನು ಸಮಾಧಿಯೋಗದ ಮೂಲಕ ವೇದವಾಣಿ - ದೇವವಾಣಿ ಎಲ್ಲಿ ಮೊಳಗಿತ್ತೋ ಅಲ್ಲಿಗೆ ತಂದು ನೆಲೆನಿಲ್ಲಿಸುತ್ತವೆ. ಇಂಥ ಆಪ್ತವಾದ ವೇದಸಾಹಿತ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. ಅವುಗಳ ವಾತ್ಸಲ್ಯವು ಸಾವಿರ ಸಾವಿರ ತಾಯಿತಂದೆಯರ ಕಾರುಣ್ಯಕ್ಕೆ ಏನೂ ಕಡಿಮೆಯಲ್ಲ. ಶ್ರವಣಪರಂಪರೆಯಿಂದ ಸಾಗಿ ಬಂದ ಭಾರತೀಯ ಸಾಹಿತ್ಯವು ಎಂದೆಂದಿಗೂ ಉಳಿಯುತ್ತದೆ -

ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ।
ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥

ಇದು ಚತುರ್ಮುಖ ಬ್ರಹ್ಮನೇ ವಾಲ್ಮೀಕಿಗೆ ರಾಮಾಯಣದ ಬಗ್ಗೆ ಹೇಳಿದ ಮಾತಾದರೂ ಸಮಸ್ತವಾಙ್ಮಯದ ಭವಿಷ್ಯವನ್ನೇ ವರ್ಣಿಸುತ್ತದೆ. ಎಲ್ಲಿಯ ವರೆಗೆ ಪರ್ವತಗಳು, ನದಿಗಳು, ಸಮುದ್ರಗಳು, ವನಕಾನನಗಳು ಇರುವವೋ, ಎಲ್ಲಿಯವರೆಗೆ ಮಾನವನ ಜೀವನವು ಮುಂದುವರಿಯುವುದೋ ಅಲ್ಲಿಯವರೆಗೆ ಈ ಸನಾತನಸಾಹಿತ್ಯವು ಕೈದೀವಿಗೆಯಂತೆ ಪ್ರಸ್ತುತವಾಗುವುದು.

ಭಾರತೀಯ ಸಾಹಿತ್ಯದ ಮುಖ್ಯವಸ್ತು ಧರ್ಮ, ಪರಮಾತ್ಮ ಮತ್ತು ಧರ್ಮದಿಂದ ದೇವನನ್ನು ಸೇರುವ ಜೀವನಯಾತ್ರೆ. ಧರ್ಮವೂ ಸನಾತನ, ಜೀವನೂ ಸನಾತನ, ದೇವನೂ ಸನಾತನ. ಆದ್ದರಿಂದ ಸನಾತನವನ್ನು ವರ್ಣಿಸುವ ಸಾಹಿತ್ಯ ಸನಾತನವಾಗದೇ ಉಳಿದೀತೇ?

(ಲೇಖಕರ 'ಸದಾತನ' ವೆಂಬ ಪುಸ್ತಕದಿಂದ ಆಯ್ದಭಾಗ)

ಬಾಲಕರ ಅಣ್ಣ : ಕೈಲಾಶ್ ಸತ್ಯಾರ್ಥಿ

– ಡಾ॥ಆರ್. ಪೊನ್ನು
– ಅನು : ಡಾ. ಹೆಚ್. ಪಾಂಡುರಂಗ ವಿಠಲ

('ಬಾಲಕರ ಜೀತ ಮಾನವೀಯತೆಯ ವಿರುದ್ಧದ ಅಪರಾಧ. ಇಲ್ಲಿ ಪಣಕ್ಕಿರುವುದು ಮಾನವೀಯತೆಯೇ. ತುಂಬ ಕೆಲಸ ಇನ್ನೂ ಆಗಬೇಕಿದೆಯಾದರೂ ನನ್ನ ಜೀವಮಾನದಲ್ಲಿಯೆ ಬಾಲ ಕಾರ್ಮಿಕ ಪದ್ಧತಿಯು ಕೊನೆಯಾಗುವುದನ್ನು ನೋಡುತ್ತೇನೆ. ಪ್ರಪಂಚದ ಯಾವುದೇ ಭಾಗದಲ್ಲಿಯಾದರೂ ಒಬ್ಬ ಬಾಲಕ ಎಳೆಯ ಜೀತಗಾರನಾಗಿದ್ದರೆ ಅದು ಮಾನವೀಯತೆಗೆ ಒಂದು ಕಳಂಕ. ಅದೊಂದು ಅವಮಾನ.') (ಕೈಲಾಶ್ ಸತ್ಯಾರ್ಥಿ)

ಭಾರತದ ಆತ್ಮಕ್ಕೆ ಕಠಾರಿಯಂತೆ ಇರುವುದು ಬಾಲಕಾರ್ಮಿಕ ಪದ್ಧತಿ. ವಿಶ್ವದ ಬಾಲಕಾರ್ಮಿಕರಲ್ಲಿ ಪ್ರತಿಶತ ಮೂವತ್ತರಷ್ಟು ಮಂದಿ ಇಲ್ಲಿಯೆ ಇದ್ದಾರೆಂಬ ವಿಲಕ್ಷಣ ಪ್ರಸಿದ್ಧಿಯನ್ನು ಭಾರತ ಪಡೆದಿದೆ. ಭಾರತದ ಜನಗಣತಿ ೫-೧೪ವರ್ಷ ವಯಸ್ಸಿನ ಬಾಲಕಾರ್ಮಿಕರ ಸಂಖ್ಯೆಯಲ್ಲಿ ೧೯೯೧ರಲ್ಲಿ ಇದ್ದ ೧ಕೋಟಿ ೧೨.೮ಲಕ್ಷದಿಂದ ೨೦೦೧ರಲ್ಲಿ ೧ಕೋಟಿ ೨೫.೯ಲಕ್ಷಕ್ಕೆ ಹೆಚ್ಚಳವಾಗಿರುವುದನ್ನು ಗುರುತಿಸಿದೆ. ಭಾರತದ ಹೊಟೇಲುಗಳು, ಬೀದಿಬದಿಯ ಅಂಗಡಿಗಳು; ಬೆಂಕಿಕಡ್ಡಿ, ಪಟಾಕಿ ಮತ್ತು ಸ್ಫೋಟಕಗಳ ಉದ್ಯಮಗಳು; ಗಾಜು ಮತ್ತು ಬಳೆ ಕಾರ್ಖಾನೆಗಳು; ರತ್ನಗಂಬಳಿ ,ಬೀಗ, ಹಿತ್ತಾಳೆ ಪದಾರ್ಥಗಳು, ರಫ್ತು ಉದ್ದೇಶದ ಸಿದ್ಧ ಉಡುಪು ತಯಾರಿಯಲ್ಲಿ; ವಜ್ರ ಕೈಗಾರಿಕೆ, ರತ್ನಗಳಿಗೆ ಹೊಳಪು ನೀಡುವ ಘಟಕಗಳಲ್ಲಿ; ಸ್ಲೇಟ್ ಗಣಿಗಳು ಮತ್ತು ತಯಾರಿಕೆ ಘಟಕಗಳಲ್ಲಿ; ಚರ್ಮ ವಸ್ತುಗಳ ಉದ್ಯಮದಲ್ಲಿ; ಕಟ್ಟಡ ನಿರ್ಮಾಣಗಳಲ್ಲಿ; ಇಟ್ಟಿಗೆ ತಯಾರಿಕೆಯಲ್ಲಿ; ಮೆಕ್ಯಾನಿಕ್‌ಗಳ, ಮೇಸ್ತ್ರಿಗಳ, ಬಡಗಿಗಳ ಹಾಗೂ ಪತ್ರಕರ್ತರ, ಬಾಲಕಾರ್ಮಿಕ ವಿಷಯಗಳ ಪ್ರಚಾರಕರ ಸಹಾಯಕರಾಗಿ ಬಾಲ ಕಾರ್ಮಿಕರು ಹೆಚ್ಚಾಗಿ ದುಡಿಯುತ್ತಿರುವುದು. ನೋಡಲು ಒರಟಾಗಿರುವ, ಮೃದುಮಾತಿನ, ತಿಳಿಮಾತುಗಳ, ಭಾವೋದ್ವೇಗದ ಹಾಗೂ ಸ್ನೇಹಪರರಾದ ಸತ್ಯಾರ್ಥಿಯವರು ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಗೆ ಭಾಜನರಾಗುವವರೆಗೆ ಇತರರ ಕಣ್ಣಿಗೆ ಬೀಳದಂತೆ ಇದ್ದರು.

ಮಧ್ಯಪ್ರದೇಶದ ಭೋಪಾಲ್‌ನಿಂದ ೫೦ ಕಿ.ಮೀ. ದೂರದಲ್ಲಿನ ವಿದಿಶಾ ನಗರದಲ್ಲಿ ಪೊಲೀಸ್ ಅಧಿಕಾರಿಯೊಬ್ಬರ ಮಗನಾಗಿ ೧೧ ಜನವರಿ ೧೯೫೪ರಂದು ಜನಿಸಿದ ಸತ್ಯಾರ್ಥಿಯವರು ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿಯನ್ನು

ಸಮ್ರಾಟ್ ಅಶೋಕ್ ಟೆಕ್ನಲಾಜಿಕಲ್ ಇನ್ಸ್‌ಟಿಟ್ಯೂಟ್ (SATI) ನಿಂದ ಪಡೆದು, ಹೈ-ವೋಲ್ಟೇಜ್ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡಿದರು. ತರಬೇತಿಯಿಂದ ಅವರು ಇಲೆಕ್ಟ್ರಿಕಲ್ ಇಂಜಿನಿಯರ್ ಆಗಿದ್ದರೂ, ಅವರು ಕೆಲಸ ಪ್ರಾರಂಭಿಸಿದುದು ಎಳೆಯರು ಮತ್ತು ಅವರ ತಂದೆತಾಯಿಗಳು ಜೀತದಾಳುಗಳಾಗಿ ಕೆಲಸ ಮಾಡುತ್ತಿದ್ದ ರಗ್ ತಯಾರಿಕೆ ಮತ್ತು ಇತರ ಭಾರತೀಯ ಉತ್ಪಾದಕ ಘಟಕಗಳ ಮೇಲೆ ದಾಳಿಗಳನ್ನು ಸಂಘಟಿಸುವುದರಲ್ಲಿ. 'ಚಿಕ್ಕಂದಿನಿಂದ ನನಗೆ ಎಳೆಯರಿಗಾಗಿ ಕೆಲಸ ಮಾಡುವುದರಲ್ಲಿ ಅತ್ಯಾಸಕ್ತಿ; ನಾನು ಇದನ್ನು ದೊಡ್ಡವನಾದಮೇಲೂ ಮುಂದುವರೆಸಿದೆ' ಎನ್ನುತ್ತಾರೆ ಸತ್ಯಾರ್ಥಿ. ತಮ್ಮ ಶಾಲೆಯ ಹೊರಗೆ ಮೆಟ್ಟಲುಗಳ ಮೇಲೆ ತನ್ನದೇ ವಯಸ್ಸಿನ ಬಾಲಕನೊಬ್ಬ ತನ್ನ ತಂದೆಯೊಡನೆ ಶೂ ಪಾಲಿಶ್ ಮಾಡುತ್ತ ಕುಳಿತುದನ್ನು ನೋಡಿದಾಗ ಆರು ವರ್ಷ ವಯಸ್ಸಿನ ಸತ್ಯಾರ್ಥಿಯ ಸಾಮಾಜಿಕ ಪ್ರಜ್ಞೆ ಜಾಗ್ರತವಾಯಿತು. ಇನ್ನೂ ಅನೇಕ ಬಾಲಕರು ಶಿಕ್ಷಣ ಪಡೆಯುವುದರ ಬದಲು ಕೆಲಸ ಮಾಡುತ್ತಿರುವುದನ್ನು ಕಂಡ ಅವರಿಗೆ ತಾನು ದೊಡ್ಡವನಾದ ಮೇಲೆ ಈ ಸಮಸ್ಯೆಯನ್ನು ಪರಿಹರಿಸಬೇಕು ಎನ್ನಿಸಿತು-ಈ ಯೋಚನೆ ಅವರನ್ನು ಮುಂದೆ ಉಗ್ರ ಪ್ರತಿಪಾದಕರನ್ನಾಗಿಸಿತು. 'ಬಾಲಕಾರ್ಮಿಕ ಪದ್ಧತಿಯ ಮುಂದುವರಿಕೆಗೆ ಬಡತನವನ್ನು ನೆವವಾಗಿ ಬಳಸುವುದು ತಪ್ಪು ಎಂದು ನಾನು ಒತ್ತಿ ಹೇಳುತ್ತೇನೆ. ಇದು ಬಡತನವನ್ನು ನಿರಂತರವಾಗಿ ಮುಂದುವರೆಸುವುದು. ಶಿಕ್ಷಣ ವಂಚಿತರಾದರೆ ಬಾಲಕರು ಬಡವರಾಗಿಯೆ ಉಳಿಯುವರು.' ಎಂದು ಅವರು ಹೇಳುತ್ತಾರೆ. ಮಹಾತ್ಮ ಗಾಂಧಿಯವರ ವಿಚಾರಗಳಿಂದ ಪ್ರಭಾವಿತರಾದ ಸತ್ಯಾರ್ಥಿ ತಮ್ಮ ಅಧ್ಯಾಪಕ ಉದ್ಯೋಗವನ್ನು ಬಿಟ್ಟು ೧೯೮೦ರಲ್ಲಿ ಜೀತ ಮುಕ್ತಿ ರಂಗದ ಪ್ರಧಾನ ಕಾರ್ಯದರ್ಶಿಯಾದರು. ನಿರುದ್ಯೋಗ, ಅನಕ್ಷರತೆ, ಜನಸಂಖ್ಯಾ ಸ್ಫೋಟ, ಬಡತನದ ನಿರಂತರ ಮುಂದುವರಿಕೆ ಮೊದಲಾದ ಸಾಮಾಜಿಕ ಕೆಡುಕುಗಳಿಗೆ ಬಾಲಕಾರ್ಮಿಕ ಪದ್ಧತಿಯೇ ಮೂಲ ಎಂದು ಅವರು ಸ್ಥಾಪಿಸಿದರು.

ಬಚ್‌ಪನ್ ಬಚಾವೋ ಆಂದೋಲನ್(BBA)

ಎಲ್ಲ ಬಾಲಕಯರು ಶೋಷಣೆಯಿಂದ ಮುಕ್ತರಾಗಿ ಉಚಿತ ಹಾಗೂ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಬಾಲಸ್ನೇಹಿ ಸಮಾಜವೊಂದನ್ನು ಸೃಷ್ಟಿಸಬೇಕೆಂದು ಕೈಲಾಶ್ ಸತ್ಯಾರ್ಥಿಯವರು ಮಗುವನ್ನು ರಕ್ಷಿಸಿ, ಬಾಲ್ಯವನ್ನು ಉಳಿಸಿ ಎನ್ನುವ ಬಚ್‌ಪನ್ ಬಚಾವೋ ಆಂದೋಲನ್(BBA)ಅನ್ನು ೧೯೮೦ರಲ್ಲಿ ಸ್ಥಾಪಿಸಿದರು. ಬಾಲಕಾರ್ಮಿಕರು ಹಾಗೂ ತುಂಬ ಕಡಿಮೆ ಹಣಕ್ಕೆ,

ಅಲ್ಪಾವಧಿ ಸಾಲಕ್ಕೆ ವರ್ಷಗಟ್ಟಲೆ ಜೀತದಾಳುಗಳಾಗಿ ಅವರ ತಂದೆತಾಯಿಯರು ದುಡಿಯುತ್ತಿರುವ ಕಾರ್ಖಾನೆಗಳ, ಇಟ್ಟಿಗೆ ತಯಾರಕರ, ರತ್ನಗಂಬಳಿ ತಯಾರಕರ ಮೇಲೆ ದಾಳಿ ಮಾಡಲು ಆರಂಭಿಸಿದರು. ಆಂದೋಲನದ ಗುರಿ ಬಾಲಕಾರ್ಮಿಕರನ್ನು ಪತ್ತೆಹಚ್ಚುವುದು, ನೇರ ಮಧ್ಯಪ್ರವೇಶಗಳಿಂದ, ಎಳೆಯರು ಮತ್ತು ಸಮುದಾಯದ ಭಾಗವಹಿಸುವಿಕೆಯಿಂದ, ಅವರನ್ನು ಬಿಡುಗಡೆಗೊಳಿಸಿ, ಪುನರ್ವಸತಿ ಹಾಗೂ ಶಿಕ್ಷಣ ನೀಡುವುದು, ಬಳಕೆದಾರರ ಚಳುವಳಿ, ಒಕ್ಕೂಟ ನಿರ್ಮಾಣ, ಸ್ವಾಮುದಾಯಿಕ ಉದ್ಯಮಗಳ ಮೇಲೆ ನೀತಿಯುಕ್ತ ವ್ಯಾಪಾರದ ನಡವಳಿಕೆಗಳನ್ನು ಸ್ಥಾಪಿಸುವುದು. ಈ ಧ್ಯೇಯವನ್ನು ತೀರ ಕೆಳಹಂತಗಳಿಂದ ಪ್ರಚುರಗೊಳಿಸಿ, ಜೀತ, ಬಾಲಕಾರ್ಮಿಕ ಪದ್ಧತಿ ಮತ್ತು ಮಾನವ ಸಾಗಣೆಗಳನ್ನು ಮೂಲೋತ್ಪಾಟನೆಗೊಳಿಸುವ ನೇರ ಕ್ರಿಯೆಯನ್ನು ಇಷ್ಟಪಡುವ ಜನರ ಆಂದೋಳನವನ್ನಾಗಿಸಿದರು. ಇದು ಭಾರತದ ಎಲ್ಲ ಮಕ್ಕಳಿಗೂ ಶಿಕ್ಷಣ ಪಡೆಯುವ ಹಕ್ಕಿಗಾಗಿ ಒತ್ತಾಯಿಸಿತು. ಮಕ್ಕಳ ಹಕ್ಕಿನ ಪರವಾಗಿದ್ದು, ರಕ್ಷಣೆಯ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ೭೫೦ ಸಂಸ್ಥೆಗಳು, ೮೦,೦೦೦ ವ್ಯಕ್ತಿಗಳಿಗೂ ಹೆಚ್ಚಿನವರು ಬಿಬಿಎ ಸದಸ್ಯರಾಗಿದ್ದಾರೆ. ಇದು ಬಾಲ ಕಾರ್ಮಿಕರ ಜೀತದಿಂದ ತಯಾರಾದ ಪಧಾರ್ಥಗಳ ಬಳಕೆಯ ವಿರುದ್ಧ ದೇಶದ ಹಾಗೂ ವಿದೇಶದ ಬಳಕೆದಾರರು ದನಿ ಎತ್ತುವಂತೆ ಮಾಡಿ ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಹೋರಾಡುವುದು. ಅಲ್ಲದೆ ನೇರ ಕಾನೂನು ಕ್ರಮ ಹಾಗೂ ಅವರ ಪರವಾಗಿ ನಿಲ್ಲುವ ಕೆಲಸವನ್ನೂ ಈ ಆಂದೋಲನ ನಡೆಸಿದೆ. ಈ ವರೆಗೆ ೮೦,೦೦೦ ಬಾಲ ಕಾರ್ಮಿಕರು ಹಾಗೂ ಜೀತದ ಅಡಿ ದುಡಿಯುತ್ತಿರುವವರನ್ನು ರಕ್ಷಿಸಲಾಗಿದೆ ಮತ್ತು ಅವರ ಪುನರ್ವಸತಿ, ಶಿಕ್ಷಣ ಮತ್ತು ಸಮಾಜದೊಡನೆ ಹೊಂದಾಣಿಕೆಗಳ ಬಗ್ಗೆ ಸಹಾಯ ಮಾಡಲಾಗಿದೆ.

ಆಂದೋಲನದ ಕಾರ್ಯಕ್ಕೆ ಮೂರು ಅಂಗಗಳು – ತಡೆಗಟ್ಟುವುದು, ರಕ್ಷಣೆ ಮತ್ತು ಪುನರ್ವಸತಿ. ಸಮುದಾಯದ ಮಧ್ಯಪ್ರದೇಶದೊಡನೆ ತಡೆಗಟ್ಟುವುದನ್ನು ಪ್ರೋತ್ಸಾಹಿಸುವುದು. ಬಾಲಕಾರ್ಮಿಕ ಪದ್ಧತಿಯನ್ನು ತಂದೆತಾಯಂದಿರೂ ಉದ್ಯೋಗದಾತರೂ ಸಹಿಸಿಕೊಳ್ಳುವ ಗ್ರಾಮಪ್ರದೇಶಗಳಲ್ಲಿ, ಅತ್ಯಂತ ಕೆಳಗಿನ ಹಂತದಲ್ಲಿ ಸಮಸ್ಯೆಗಳನ್ನು ವಿವರಿಸಿ, ಸಾರ್ವಜನಿಕರಿಗೆ ಅರಿವು ಮೂಡಿಸುವ ಪ್ರಚಾರದ ಆಂದೋಲನ ಮೊದಲು. ಬಾಲಕಾರ್ಮಿಕ ಪದ್ಧತಿ ಮತ್ತು ಎಳೆಯರ ಸಾಗಣೆಯನ್ನು ತಡೆಗಟ್ಟುವ ಅತ್ಯುತ್ತಮ ಅನುಷ್ಠಾನ ಮಾದರಿ ಈ ಆಂದೋಲನದ ಬಾಲಮಿತ್ರಗ್ರಾಮ ಯೋಜನೆ. ಬಾಲಕಾರ್ಮಿಕರಿಲ್ಲದ, ಎಲ್ಲ ಎಳೆಯರೂ ಶಾಲೆಯಲ್ಲಿ ನೋಂದಾಯಿತರಾಗಿರುವ ಹಾಗೂ ಅವರಿಗೇ

ಮೀಸಲಾದ ಹಾಗೂ ಚುನಾಯಿತ ಗ್ರಾಮ ಪಂಚಾಯತಿಯಿಂದ ಅಂಗೀಕರಿಸಲ್ಪಟ್ಟ ಬಾಲಪಂಚಾಯತ್ (ಎಳೆಯರ ಸಾರ್ವಜನಿಕ ಸಭೆ)ಗೆ ಸೇರಿಕೊಂಡಿರುವ ಹಳ್ಳಿಗಳನ್ನು ಈ ಯೋಜನೆಯು ಮಾನ್ಯಮಾಡುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಭಾರತೀಯ ಶಾಸನಾತ್ಮಕ ನಿಬಂಧನೆಗಳನ್ನು ಬಾಲಕಾರ್ಮಿಕ ಪದ್ಧತಿ ಮತ್ತು ಎಳೆಯರ ಸಾಗಣೆಯನ್ನು ತಡೆಗಟ್ಟಲು ಉಪಯೋಗಿಸಲಾಗುವುದು ಮತ್ತು ಅಂತಹ ಶಾಸನಗಳನ್ನು ಬಿಗಿಗೊಳಿಸಲು ಹಾಗೂ ಅಭಿವೃದ್ಧಿಪಡಿಸಲು ಚಳುವಳಿ ಮಾಡಲಾಗುವುದು. ಈಗಾಗಲೆ ದುಡಿದ ಕೂಲಿಯ ಹಣ ಹಾಗೂ ಬಾಲಕರನ್ನು ಉದ್ಯೋಗಕ್ಕೆ ಸೇರಿಸಿಕೊಂಡವರ ಮತ್ತು ಸಾಗಣೆಗೆ ಕಾರಣರಾದವರ ಮೇಲೆ ವಿಧಿಸಲಾದ ದಂಡ(೨೦,೦೦೦) ಮತ್ತು ಸರ್ಕಾರದ ಪರಿಹಾರ ರೂ.೨೦,೦೦೦ ಗಳನ್ನು ವಸೂಲು ಮಾಡುವ ಕೆಲಸವನ್ನೂ ಬಚ್‌ಪನ್ ಬಚಾವೋ ಆಂದೋಲನ್(ಬಿಬಿಎ) ಮಾಡುತ್ತದೆ. ಅಲ್ಲದೆ ಶಾಸನೋಕ್ತ ಪುನರ್ವಸತಿಯು (ಪರಿಹಾರ ಮತ್ತು ಇತರ ಸರಕಾರಿ ಸಾಮಾಜಿಕ ಸುಧಾರಣಾ ಕಾರ್ಯಕ್ರಮಗಳ ಅಡಿ ಸಿಗುವ ಸವಲತ್ತುಗಳು) ರಾಜ್ಯಸರ್ಕಾರದ ಜವಾಬ್ದಾರಿ ಎಂಬುದನ್ನೂ ಬಿಬಿಎ ಖಾತ್ರಿ ಮಾಡುತ್ತದೆ.

ಮುಕ್ತಿ ಆಶ್ರಮ

ದಿಲ್ಲಿ ಮತ್ತು ಸುತ್ತಣ ಪ್ರದೇಶಗಳಲ್ಲಿ ಮುಕ್ತಗೊಳಿಸಲ್ಪಟ್ಟ ಬಾಲಕಾರ್ಮಿಕರ ಸಂಕ್ರಮಣ ವಸತಿ ಕೇಂದ್ರಗಳೆ ದಿಲ್ಲಿಯ ಹೊರವಲಯದಲ್ಲಿನ ಮುಕ್ತಿ ಆಶ್ರಮ; ಇತರ ಸ್ಥಳದವರಿಗೆ ರಾಜಸ್ಥಾನದ ವಿರಾಟ್ ನಗರದಲ್ಲಿನ ಬಾಲ ಆಶ್ರಮ. ಬಾಲಕಾರ್ಮಿಕ ಮತ್ತು ಸಾಗಣೆ ಕೇಸುಗಳಲ್ಲಿ ಅವರು ಬಿಡುಗಡೆಯಾದ ಕೂಡಲೇ ಕಾನೂನು ಕ್ರಮಗಳು ಮುಗಿಯುವ ತನಕ ಮತ್ತು ಅವರು ತಮ್ಮ ಊರಿಗೆ ಮರಳಿ, ತಮ್ಮ ಕುಟುಂಬಗಳನ್ನು ಸೇರುವ ವರೆಗೆ ಇವುಗಳಲ್ಲಿ ಇರುವಾಗ, ಅವರಿಗೆ ವೈದ್ಯಕೀಯ ನೆರವು, ಆಹಾರ, ಬಟ್ಟೆ, ಮನರಂಜನೆಯ ಸೌಲಭ್ಯ, ಕ್ರೀಡೆ, ರಂಗ ಮಂದಿರ ಮತ್ತು ಆಪ್ತಸಲಹೆಗಳನ್ನು ಒದಗಿಸಲಾಗುವುದು. ಹಿಂದಿರುಗಬಹುದಾದ ಕುಟುಂಬವೇ ಇಲ್ಲದ ಎಳೆಯರಿಗೆ ಬಾಲ ಆಶ್ರಮವೇ ಹೊಸ ಮನೆಯಾಗಿದ್ದು, ಇಲ್ಲಿ ಮೂಲಶಿಕ್ಷಣ, ಸಾಂಪ್ರದಾಯಿಕ ಶಿಕ್ಷಣ, ಜೀವನ ನಡೆಸಲು ಬೇಕಾದ ವೃತ್ತಿ ಶಿಕ್ಷಣವನ್ನು ಪಡೆಯಬಲ್ಲರು.

ಬಾಲಮಿತ್ರಗ್ರಾಮಗಳು

ಒಂದು ಹಳ್ಳಿಯನ್ನು ಬಾಲಮಿತ್ರಗ್ರಾಮ ಎಂದು ಘೋಷಿಸಬೇಕಾದರೆ ಅಲ್ಲಿನ ಎಲ್ಲ ಎಳೆಯರೂ ಉದ್ಯೋಗ ಮುಕ್ತರಾಗಿದ್ದು ಶಾಲೆಯಲ್ಲಿ ನೋಂದಾಯಿತ

ವಿದ್ಯಾರ್ಥಿಗಳಾಗಿ, ಬಾಲಪಂಚಾಯತ್ (ಎಳೆಯರ ಪಾರ್ಲಿಮೆಂಟ್)ಗೆ ಸೇರಿಕೊಂಡಿರಬೇಕು. ಉದ್ಯೋಗ ಹೆಚ್ಚಳ ಮತ್ತು ಸಾರ್ವಜನಿಕ ಸೇವೆಗಳ ಸುಲಭಗಮ್ಯತೆ ಇರುವುದರಿಂದ ವಯಸ್ಕರೂ ಇದರಿಂದ ಲಾಭ ಪಡೆಯುವರು. ಗುಲಾಮ ಮಕ್ಕಳ ಬಿಡುಗಡೆ ಮತ್ತು ಪುನರ್ವಸತಿಯೆ ಮುಖ್ಯ ಕಾರ್ಯಾಚರಣೆಯಾದ ಬಿಬಿಎ ಉತ್ತರ ಪ್ರದೇಶದ ಲಖೀಮ್‌ಪುರ್ ಖೇರಿ ಪ್ರದೇಶದಲ್ಲಿ ಇಪ್ಪತ್ತು ಬಾಲಮಿತ್ರಗ್ರಾಮಗಳನ್ನು ಪೋಷಿಸುತ್ತಿದೆ.

ಬಾಲಮಿತ್ರಗ್ರಾಮದ ಅಭಿವೃದ್ಧಿ ಸಂಪೂರ್ಣಗೊಳ್ಳಲು ಎರಡು ಮೂರು ವರ್ಷ ಹಿಡಿಯುವುದು. ಬಾಲಕಾರ್ಮಿಕರು ಅತಿ ಹೆಚ್ಚಾಗಿರುವ ಹಾಗೂ ಮಕ್ಕಳ ಶಾಲಾ ಹಾಜರಾತಿ ಅತಿ ಕಡಿಮೆ ಇರುವ ೨೦ ಹಳ್ಳಿಗಳನ್ನು ಆರಿಸಲಾಯಿತು. ಈ ಹಳ್ಳಿಗಳಲ್ಲಿ ಬಿಬಿಎ ಎರಡು ವರ್ಷಗಳು ಕೆಲಸ ಮಾಡಿ ಉತ್ತಮ ಫಲಿತಾಂಶ ಗಳಿಸಿದೆ. ಈ ಹಳ್ಳಿಗಳಲ್ಲಿ ಒಟ್ಟು ೭೪೯ ಬಾಲಕಾರ್ಮಿಕರನ್ನು ಮುಕ್ತಗೊಳಿಸ ಲಾಯಿತು ಮತ್ತು ಶಾಲೆಗೆ ಹಾಜರಾಗದ ೧೭೬೧ ಮಕ್ಕಳು ಈಗ ಶಾಲೆಗೆ ಹೋಗುತ್ತಿದ್ದಾರೆ. ಜತೆಗೆ, ಕಾರ್ಯಕ್ರಮದ ಅಡಿ ಶಾಲಾಕೊಠಡಿಗಳ ನಿರ್ಮಾಣ, ಶಾಲೆಗಳಲ್ಲಿ ಶುದ್ಧ ನೀರು ಸರಬರಾಜು, ಉಪಾಧ್ಯಾಯರುಗಳ ನೇಮಕಾತಿ ನಡೆಯಿತು. ಭಾರತದ ಅನೇಕ ಪ್ರದೇಶಗಳಲ್ಲಿ ೨೦೦೧ ರಿಂದ ಈಚೆಗೆ ಒಟ್ಟು ೩೧೭ ಬಾಲಮಿತ್ರಗ್ರಾಮಗಳನ್ನು ರಚಿಸಲಾಗಿದೆ. ಬಿಬಿಎ ಇತ್ತೀಚೆಗೆ ಹಮ್ಮಿಕೊಂಡ ಕಾರ್ಯಾಚರಣೆಯೆಂದರೆ ಬಾಲಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ) ಕಾಯದೆ ೧೯೮೬ ಗೆ ೧೪ ವರ್ಷದ ವರೆಗೆ ಎಳೆಯರನ್ನು ಉದ್ಯೋಗದಲ್ಲಿ ತೊಡಗಿಸಬಾರದು ಎನ್ನುವ ತಿದ್ದುಪಡಿಗಾಗಿ ನಡೆಸಿದ 'ಬಾಲಕಾರ್ಮಿಕ ಮುಕ್ತ ಭಾರತ' ಚಳುವಳಿ. ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಒತ್ತಾಯದ ಬೇಡಿಕೆ ಇದ್ದ ಈ ಚಳುವಳಿಯಲ್ಲಿ ೧೮೦ ಪಾರ್ಲಿಮೆಂಟ್ ಸದಸ್ಯರು ಪಾಲ್ಗೊಂಡಿದ್ದರು. ದೇಶದ ಉದ್ದಗಲದಲ್ಲಿ ೧೫೦೦೦ ಕಿ.ಮೀ. ಜಾಥಾ ನಡೆಸಲಾಯಿತು. ಪರಿಣಾಮವಾಗಿ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಮಕ್ಕಳ ಹಕ್ಕನ್ನಾಗಿಸಿ ಸಂವಿಧಾನ ತಿದ್ದುಪಡಿ ಮಾಡಲಾಯಿತು.

ಬಾಲ ಮನೆಕಾರ್ಮಿಕ ಚಳುವಳಿ

ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳ ಎಲ್ಲ ನ್ಯಾಯಮೂರ್ತಿಗಳು, ಶಿಕ್ಷಣ ಇಲಾಖೆ, ಸಮಾಜಕಲ್ಯಾಣ ಇಲಾಖೆಗಳ ಮುಖ್ಯಸ್ಥರುಗಳು, ಸಂವಿಧಾನ ತಜ್ಞರುಗಳು, ಲೋಕಸಭೆ ಹಾಗೂ ರಾಜ್ಯಸಭೆಗಳ ಸದಸ್ಯರುಗಳು ಮತ್ತಿತರಿಗೆ ಅರಿವು ಮೂಡಿಸಲು ೬೬೪೭ ಪತ್ರಗಳನ್ನು ಕಳಿಸಲಾಯಿತು. ದೇಶದಾದ್ಯಂತ ೩೨೦ ಹಳ್ಳಿಗಳು ಹಾಗೂ ಖಘಂಗಳಲ್ಲಿ ೧೬೪೩೦ ಪೋಸ್ಟರುಗಳನ್ನು

ಅಂಟಿಸಲಾಯಿತು. ದಿಲ್ಲಿಯಲ್ಲಿ ೨೨೫ ನಿವಾಸಿ ಕಲ್ಯಾಣ ಸಂಘಟನೆ(ಖಘಂ)ಗಳು ತಮ್ಮ ಸದಸ್ಯರ ಮನೆಗಳನ್ನು ಬಾಲಕಾರ್ಮಿಕ ಮುಕ್ತ ಎಂದು ಘೋಷಿಸಿದವು. ಉತ್ತರಪ್ರದೇಶ, ಬಿಹಾರ ದಿಲ್ಲಿ ಮತ್ತು ರಾಜಸ್ತಾನಗಳಲ್ಲಿನ ಮುಕ್ತಿ ಜಾಥಾತಂಡಗಳು (ಎಳೆಯರ ಸಾಗಣೆ ವಿರುದ್ಧದ ಚಳುವಳಿ) ೧೫೦ ಹಳ್ಳಿಗಳನ್ನು ಸಂದರ್ಶಿಸಿ, ೭೫೦ ಬೀದಿ ನಾಟಕಗಳು, ೩೫೦೦ ಗೋಡೆ ಬರಹಗಳು, ಸಭೆಗಳನ್ನು ನಡೆಸಿದುವು. ೭೦ ಸಾರ್ವಜನಿಕ ಜಾಗ್ರತ ಸಮಿತಿಗಳನ್ನು ರಚಿಸಲಾಯಿತು. ೧೩೭ ಬಾಲಕಾರ್ಮಿಕರನ್ನು ೨೫೦ ಶಾಲೆಗಳವರು ಗುರುತಿಸಿ, ಮುಖ್ಯವಾಹಿನಿಗೆ ತಂದರು. ಎರಡು ಬಾಲ್ಯವಿವಾಹಗಳನ್ನು ತಡೆಗಟ್ಟಲಾಯಿತು. ಸುಮಾರು ೩೫೦ ದೂರುಗಳನ್ನು ಸ್ವೀಕರಿಸಲಾಯಿತು.

ತಪ್ಪಿಸಿಕೊಂಡ ಮಕ್ಕಳು ಚಳುವಳಿ

ತಪ್ಪಿಸಿಕೊಂಡ ಮಕ್ಕಳ ಬಗೆಗಿನ ಕೈಲಾಶ್ ಸತ್ಯಾರ್ಥಿಯವರ ಸಂಶೋಧನೆಯ ಪರಿಣಾಮ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ತಪ್ಪಿಸಿಕೊಂಡ ಮಕ್ಕಳ ಬಗ್ಗೆ ಸುಪ್ರೀಂ ಕೋರ್ಟು ಎಚ್ಚರಿಕೆಯ ಸೂಚನೆ ನೀಡುವಂತೆ ಆಯಿತು. ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಜಾಗತಿಕ ಜಾಥಾದ ಜತೆ ಸತ್ಯಾರ್ಥಿ ತೊಡಗಿಸಿಕೊಂಡರು; ಜಾಥಾದ ಅಂತಾರಾಷ್ಟ್ರೀಯ ಸಮರ್ಥನ ಸಮುದಾಯವಾದ, ವಿಶ್ವದ ಅನೇಕ ಸರಕಾರೇತರ ಸಂಸ್ಥೆಗಳ, ಅಧ್ಯಾಪಕರ ಮತ್ತುಕಾರ್ಮಿಕ ಸಂಘಗಳ ಒಕ್ಕೂಟವಾದ ಬಾಲಕಾರ್ಮಿಕ ಮತ್ತು ಶಿಕ್ಷಣದ ಅಂತಾರಾಷ್ಟ್ರೀಯ ಕೇಂದ್ರ(International Center on Child Labor and Education-ICCLE)ದ ಜತೆಗೂ ಸಹಯೋಗ ಹೊಂದಿದ್ದರು. ಶಿಕ್ಷಣಕ್ಕಾಗಿ ಜಾಗತಿಕ ಚಳುವಳಿ(Global Campaign for Education)ಯ ನಾಲ್ವರು ಸ್ಥಾಪಕರಲ್ಲಿ ಒಬ್ಬರಾಗಿದ್ದು, ಸ್ಥಾಪನೆಯಾದ ೧೯೯೯ರಿಂದ ೨೦೧೧ರ ವರೆಗೆ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಅಲ್ಲದೆ ಜತೆಜತೆಗೇ ಕ್ರಿಯಾತ್ಮಕ ನೆರವು(Action Aid), Oxfam ಮತ್ತು ಅಂತಾರಾಷ್ಟ್ರೀಯ ಶಿಕ್ಷಣ(Education International) ಸಂಸ್ಥೆಗಳಲ್ಲೂ ಇದ್ದರು.

ಟೈಮ್ಸ್ ಆಫ್ ಇಂಡಿಯಾ ಸಂದರ್ಶನದಲ್ಲಿ ಸತ್ಯಾರ್ಥಿಯವರು ಹೀಗೆ ಹೇಳಿದ್ದರು: 'ನಾನು ಮಕ್ಕಳ ಸ್ನೇಹಿತ ಎಂಬುದೇ ನನ್ನ ತತ್ತ್ವ. ದಯೆಗೆ ಅರ್ಹರಾದವರು ಅಥವಾ ಭಿಕ್ಷೆಗೆ ಪಾತ್ರರು ಎಂದು ಯಾರೂ ಮಕ್ಕಳನ್ನು ನೋಡಬಾರದು ಎಂದು ನನ್ನ ಅನಿಸಿಕೆ. ಅದು ಹಳಬರ ಭಾಷಣವಷ್ಟೆ. ಬಾಲಿಶ ವರ್ತನೆಯು ದಡ್ಡತನ ಅಥವಾ ಮೂರ್ಖತನ ಎಂದು ಕೆಲವರು ಪರಿಗಣಿಸುತ್ತಾರೆ.

ಇಂತಹ ಮಾನಸಿಕತೆಯು ಬದಲಾಗಬೇಕು. ನಾನು ಮಕ್ಕಳಿಂದ ಕಲಿಯಬಹುದಾದ ಒಂದು ಗುಣ ಪಾರದರ್ಶಕತೆ. ಅವರು ಮುಗ್ಧರು, ಸರಳರು, ನೇರ ನಡೆನುಡಿಯವರು, ಪೂರ್ವಾಗ್ರಹ ಇಲ್ಲದವರು. ಮಕ್ಕಳ ಜತೆಗಿನ ನನ್ನ ಸ್ನೇಹವು ಆಳವಾದ ಅರ್ಥ ಹೊಂದಿದೆ ಎಂದು ಭಾವಿಸುತ್ತೇನೆ.'

ಬಾಲಕಾರ್ಮಿಕ ಪದ್ಧತಿಯು ಮಾನವಹಕ್ಕುಗಳ ವಿವಾದಾಂಶ, ಕರುಣಾಸ್ಪದ ವಿಷಯ. ಇದು ಬಡತನ, ನಿರುದ್ಯೋಗ, ಜನಸಂಖ್ಯಾ ಹೆಚ್ಚಳ ಮತ್ತಿತರ ಸಾಮಾಜಿಕ ಸಮಸ್ಯೆಗಳನ್ನು ನಿರಂತರವಾಗಿ ಮುಂದುವರೆಸುವುದು ಎಂದು ಸತ್ಯಾರ್ಥಿಯವರು ವಾದಿಸುತ್ತಾರೆ. 'ಸರ್ವ ಶಿಕ್ಷಣ ಅಭಿಯಾನ' ವನ್ನು ಸಾಧಿಸಲು ಅದನ್ನು ಬಾಲಕಾರ್ಮಿಕ ನಿಷೇಧ ಚಳುವಳಿಯ ಜತೆ ಸೇರಿಸುವಲ್ಲಿ ಸತ್ಯಾರ್ಥಿಯವರ ಪಾತ್ರ ಇದೆ. ಇದನ್ನು ಪರಿಶೀಲಿಸಲು ಯುನೆಸ್ಕೋ ಸಂಸ್ಥೆ ಸ್ಥಾಪಿಸಿದ ಪರಿಶೀಲನಾ ಸಮಿತಿಯ ಸದಸ್ಯರಾಗಿರುವುದು ಮಾತ್ರವಲ್ಲ, (ಗ್ಲೋಬಲ್ ಪಾರ್ಟ್‌ನರ್‌ಶಿಪ್ ಫಾರ್ ಎಜುಕೇಷನ್ ಎಂದು ಈಗ ಕರೆಯಲ್ಪಡುವ) ಫಾಸ್ಟ್ ಟ್ರಾಕ್ ಇನಿಶಿಯೇಟಿವ್‌ನ ಮಂಡಳಿಯಲ್ಲಿ ಅವರು ಸದಸ್ಯರಾಗಿದ್ದರು. ಇದಲ್ಲದೆ ಸತ್ಯಾರ್ಥಿಯವರು Center for Victims of Torture(USA). International Labor Rights Fund (USA), International Cocoa Foundation ಮೊದಲಾದ ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳ ಸದಸ್ಯರು. ವಿಶ್ವಸಂಸ್ಥೆಯ ಸಹಸ್ರಮಾನದ ಅಭಿವೃದ್ಧಿಯ ಗುರಿಗಳ ೨೦೧೫ನಂತರದ ಅಭಿವೃದ್ಧಿ ಕಾರ್ಯಸೂಚಿಯ ಪಟ್ಟಿಯಲ್ಲಿ ಬಾಲಕಾರ್ಮಿಕ ಪದ್ಧತಿ ಮತ್ತು ಗುಲಾಮಗಿರಿಯನ್ನು ಸೇರಿಸಲು ಈಗ ಅವರು ಕೆಲಸ ಮಾಡುತ್ತಿದ್ದಾರೆ.

'ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಜಾಗತಿಕ ಜಾಥಾ'ದ ಪ್ರಚಾರ

ಉಚಿತ ಹಾಗೂ ಅರ್ಥಪೂರ್ಣ ವಿದ್ಯಾಭ್ಯಾಸ ಪಡೆಯುವುದು, ಆರ್ಥಿಕ ಶೋಷಣೆಗೆ ಗುರಿಯಾಗದಿರುವುದು, ಮಕ್ಕಳ ದೈಹಿಕ, ಮಾನಸಿಕ, ಆಧ್ಯಾತ್ಮಿಕ, ನೈತಿಕ ಅಥವಾ ಸಾಮಾಜಿಕ ಬೆಳವಣಿಗೆಗೆ ಅಪಾಯಕಾರಿ ಎನಿಸುವ ಕೆಲಸಗಳನ್ನು ಮಾಡದೆ ಇರುವುದು ಮಕ್ಕಳ ಹಕ್ಕುಗಳು. ವಿಶ್ವದ ಎಲ್ಲೆಡೆ ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಹಾಗೂ ಬೆಂಬಲ ಕೊಡುವ ಪ್ರಯತ್ನಗಳನ್ನು ಸಜ್ಜುಗೊಳಿಸಲು ಸತ್ಯಾರ್ಥಿಯವರು 'ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಜಾಗತಿಕ ಜಾಥಾ'ವನ್ನು ೧೯೯೦ರ ದಶಕದಲ್ಲಿ ೧೦೩ ದೇಶಗಳಲ್ಲಿ ಸಂಘಟಿಸಿದರು. ಇದು ಪ್ರಪಂಚದ ಕಾರ್ಮಿಕ ಸಂಘಗಳ, ಅಧ್ಯಾಪಕರ ಮತ್ತು ನಾಗರಿಕ ಸಮುದಾಯ ಸಂಸ್ಥೆಗಳ ಒಕ್ಕೂಟವಾಗಿದ್ದು, ಇವು ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲಗೊಳಿಸಿ,

ಗುಣಮಟ್ಟದ ಶಿಕ್ಷಣವು ಎಲ್ಲ ಮಕ್ಕಳಿಗೂ ದೊರಕುವಂತೆ ಮಾಡುವ ಅಭಿವೃದ್ಧಪರ ಗುರಿಗಳನ್ನು ಹಂಚಿಕೊಂಡು ಕೆಲಸ ಮಾಡುತ್ತವೆ. ಈ ಬಗೆಗಿನ ೧೯೯೮ರ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ(ILO) ಸಮ್ಮೇಳನ ೧೮೨ಕ್ಕೆ ಇದು ದಾರಿ ಮಾಡಿಕೊಟ್ಟಿತು.

ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸುವ ಹೋರಾಟದ ಅತಿ ಮುಖ್ಯ ಅಂಶವೆಂದರೆ ನೀತಿಗಳಲ್ಲಿ ಬದಲಾವಣೆ ಆಗಲು ವಾದಮಾಡುವುದು. ಜಾಗತಿಕ ಜಾಥಾ ಇದಕ್ಕಾಗಿ ಮುಮ್ಮುಖದ ಸಮರತಂತ್ರವನ್ನು ಹೊಂದಿದೆ. ಇದು ಜಗತ್ತಿನ ಭವಿಷ್ಯದ ಮೇಲೆ ಪರಿಣಾಮ ಬೀರುವ ಮೂರು ಮುಖ್ಯ ಪ್ರಕ್ರಿಯೆಗಳು: ಬಾಲಕಾರ್ಮಿಕ ಪದ್ಧತಿಯ ನಿವಾರಣೆ, ಎಲ್ಲರಿಗೂ ಶಿಕ್ಷಣ ಮತ್ತು ಬಡತನವನ್ನು ಕಡಿಮೆ ಮಾಡುವುದು. ಬಾಲಕಾರ್ಮಿಕ ಪದ್ಧತಿ, ಎಲ್ಲರಿಗೂ ಶಿಕ್ಷಣ ಮತ್ತು ಬಡತನಗಳ ಬಗ್ಗೆ ನೀತಿ ನಿರೂಪಣೆ ಹಾಗೂ ಅನುಷ್ಠಾನಗಳನ್ನು ಒಗ್ಗೂಡಿಸಿ, ಸಂಘಟಿತ ಪ್ರತಿಕ್ರಿಯೆಯನ್ನು ರೂಪಿಸುವುದು ಜಾಗತಿಕ ಜಾಥಾದ ಪ್ರಮುಖ ವಿಷಯವಾಗಿದೆ.

ರಗ್‌ಮಾರ್ಕ್

ಸತ್ಯಾರ್ಥಿಯವರು ೧೯೯೪ರಲ್ಲಿ ಪ್ರಾರಂಭಿಸಿದ ರಗ್‌ಮಾರ್ಕ್ (ಈಗ ಇದು ಗುಡ್‌ವೀವ್ ಎಂದಾಗಿದೆ) ರತ್ನಗಂಬಳಿ ಉದ್ಯಮದಲ್ಲಿ ಚಾಲ್ತಿಯಲ್ಲಿರುವ ಅಕ್ರಮ ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸುವ ಕೆಲಸದಲ್ಲಿ ತೊಡಗಿರುವ ಲಾಭರಹಿತ ಸಂಸ್ಥೆಗಳ ಸಂಪರ್ಕ ಜಾಲವಾಗಿದೆ. ಪರಿವೀಕ್ಷಣೆಗೆ ಒಳಪಟ್ಟ ಕಂಪನಿಗಳು ತಮ್ಮ ಉತ್ಪನ್ನದ ದೃಢೀಕರಣದ ಲೋಗೋವನ್ನು ಮಾಡಿಸಿಕೊಳ್ಳುವ ಅವಕಾಶವನ್ನು ಇದು ಒದಗಿಸಿದೆ. ಭಾರತ, ನೇಪಾಳ ಮತ್ತು ಪಾಕಿಸ್ತಾನದಲ್ಲಿನ ಕೈಯಿಂದ ಗಂಟುಹಾಕುವ ರತ್ನಗಂಬಳಿ ಉದ್ಯಮವನ್ನು ಈ ಕ್ರಮವು ಹೆಚ್ಚು ಸುಧಾರಿಸಿತು. ರಗ್‌ಮಾರ್ಕ್ ಲೇಬಲ್ಲು ಬರೀ ಉತ್ತಮಿಕೆಯ ಚಿಹ್ನೆಯಾಗಿರದೆ, ಬಳಕೆದಾರರಿಗೆ ಈ ಉತ್ಪನ್ನವು ತನ್ನ ತಯಾರಿಕೆಯ ಪ್ರಕ್ರಿಯೆಯಲ್ಲಿ ಬಾಲಕಾರ್ಮಿಕರನ್ನು ಒಳಗೊಂಡಿಲ್ಲವೆಂದು ದೃಢೀಕರಿಸುತ್ತದೆ (ದಿ ಫಿಲಡೆಲ್ಫಿಯಾ ಇನ್‌ಕ್ವೈರರ್.)

ಭಾರತದಿಂದ ಕಳಿಸಲ್ಪಟ್ಟ ರತ್ನಗಂಬಳಿಯನ್ನು ತಯಾರಿಸುವಲ್ಲಿ ಯಾವುದೇ ಹಂತದ ಪ್ರಕ್ರಿಯೆಯಲ್ಲಿ ಬಾಲಕಾರ್ಮಿಕರನ್ನು ಒಳಗೊಂಡಿಲ್ಲ ಹಾಗೂ ಎಲ್ಲ ಕೆಲಸಗಾರರಿಗೆ ಭಾರತದ ಕಾನೂನಿನಂತೆ ಕನಿಷ್ಠ ಕೂಲಿಯನ್ನು ಕೊಟ್ಟಿದೆ ಎಂದು ದೃಢೀಕರಿಸಿರಬೇಕು. ಅಲ್ಲದೆ ಮಗ್ಗ ಇಟ್ಟಿರುವ ಮನೆಗಳ ಮಕ್ಕಳು ಕೆಲಸ

ಮಾಡುತ್ತಿದ್ದರೆ ಅವರು ನಿಯಮಿತವಾಗಿ ಶಾಲೆಗೆ ಹೋಗುತ್ತಿದ್ದು, ಶಾಲಾ ಹಾಜರಾತಿ ದಾಖಲೆ ಸರಿಯಾಗಿರಬೇಕು. ಅನಂತರವಷ್ಟೇ ನಿರ್ಯಾತದಾರನು ಅವರ ರತ್ನಗಂಬಳಿಗಳ ಮೇಲೆ ರಗ್‌ಮಾರ್ಕ್ ಲೇಬಲ್ ಹಾಕಬಹುದು; ಇದರಲ್ಲಿ ಒಂದು ಕೋಡ್ ಇದ್ದು, ಕೊಂಡವರು ಈ ರತ್ನಗಂಬಳಿಯ ಬಗ್ಗೆ ಫೌಂಡೇಷನ್‌ನಲ್ಲಿ ಪರಿಶೀಲಿಸಬಹುದು. ಫೌಂಡೇಷನ್‌ನಲ್ಲಿ ನೋಂದಾಯಿತವಾದ ಪ್ರತಿ ಮಗ್ಗಗಳಲ್ಲಿ ಯಾವ ಹಂತದಲ್ಲಿಯಾದರೂ ಕಾನೂನು ಬಾಹಿರವಾಗಿ ಮಕ್ಕಳನ್ನು ದುಡಿಸುತ್ತಿದ್ದಾರೆಯೆ ಎಂದು ಸ್ಥಳದಲ್ಲೆ ಪರಿಶೀಲನೆಗಳನ್ನು ನಡೆಸಲಾಗುವುದು. ೧೯೯೬ರಲ್ಲಿ ರಗ್‌ಮಾರ್ಕ್ ನೇಪಾಳಕ್ಕೂ ಹರಡಿತು. ಅದಾದನಂತರ ರಗ್‌ಮಾರ್ಕ್ ಕಾರ್ಯಕ್ರಮಗಳ ಬಗ್ಗೆ ಸಮಾಲೋಚನೆಗಳು ಜರ್ಮನಿ, ನೇಪಾಳ, ಭಾರತ ಹಾಗೂ ಅಮೆರಿಕದಲ್ಲಿ ನಡೆದು, ಅದರ ಪರಿಣಾಮವಾಗಿ ರಗ್‌ಮಾರ್ಕ್ ಇಂಟರ್ನ್ಯಾಷನಲ್ ವಿಧ್ಯುಕ್ತವಾಗಿ ಉದಯವಾಯಿತು. ಮೇ ೧೯೯೮ರಲ್ಲಿ ಇದರ ಅಂತಾರಾಷ್ಟ್ರೀಯ ಸಂವಿಧಾನ ಸ್ವೀಕೃತವಾಗಿ, ರಗ್‌ಮಾರ್ಕ್ ಇಂಟರ್ನ್ಯಾಷನಲ್ ಮುದ್ರೆಯ ದೃಢೀಕರಣ ಕಾರ್ಯಕ್ರಮವನ್ನು ಬದಲಿಸಿ ೨೦೦೯ರಲ್ಲಿ ಗುಡ್‌ವೀವ್ ಲೇಬಲ್ ಅನ್ನು ಬಳಕೆಗೆ ತರಲಾಯಿತು. ಈಗ ಈ ಅಂತಾರಾಷ್ಟ್ರೀಯ ಸಂಪರ್ಕ ತಂಡವು ಉತ್ಪಾದಕ ದೇಶೀಯ ಕಚೇರಿಗಳನ್ನು ಭಾರತ ನೇಪಾಳಗಳಲ್ಲಿಯೂ, ಬಳಕೆದಾರ ದೇಶೀಯ ಕಚೇರಿಗಳನ್ನು ಅಮೆರಿಕ, ಬ್ರಿಟನ್ ಹಾಗೂ ಜರ್ಮನಿಗಳಲ್ಲಿಯೂ ತೆರೆದಿದೆ.

ಅಮೆರಿಕ ಮತ್ತು ಯೂರೋಪ್‌ಗಳ ಬಳಕೆದಾರರಲ್ಲಿ ಅರಿವು ಮೂಡಿಸುವ ಆಂದೋಲನವನ್ನು ಪ್ರವರ್ತಿಸಿ, ಅವರನ್ನು ಬಾಲಕಾರ್ಮಿಕರು ತಯಾರಿಸಿದ ರತ್ನಗಂಬಳಿಗಳನ್ನು ಕೊಳ್ಳಲು ಹಿಂಜರಿಯುವಂತೆ ಮಾಡಿದ್ದು ಹಾಗೂ ಜತೆಜತೆಗೇ ಮಕ್ಕಳನ್ನು ಶೋಷಿಸದೆ ತಯಾರಿಸಿದ ವಸ್ತುಗಳನ್ನು ಅನುಮೋದಿಸಲು ಆರಂಭಿಸಿದ್ದು ಸತ್ಯಾರ್ಥಿಯವರ ಗಮನಾರ್ಹ ಸಾಧನೆಗಳಲ್ಲಿ ಒಂದು. ಮಕ್ಕಳ ಹಕ್ಕುಗಳ ಬಗೆಗಿನ ಕಾನೂನುಗಳನ್ನು ಜಾರಿಗೆ ತರಲು ಸತ್ಯಾರ್ಥಿಯವರು ರಾಜಕಾರಣಿಗಳ ಜತೆ ಲಾಬಿ ಮಾಡುವುದು, ಸುಪ್ರೀಂ ಕೋರ್ಟಿನ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಬಾಗಿಲುಗಳನ್ನು ಬಡಿಯುವುದು ಮೊದಲಾದ ಅನೇಕ ತಂತ್ರಗಳನ್ನು ಬಳಸುತ್ತಾರೆ.

ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸುವ ತಮ್ಮ ಧರ್ಮಯುದ್ಧದಲ್ಲಿ ಕೈಲಾಶ್ ಸತ್ಯಾರ್ಥಿಯವರು ತಮ್ಮ ಮೇಲಿನ ಅನೇಕ ಕೊಲೆ ಯತ್ನಗಳಿಂದ ಪಾರಾಗಿದ್ದಾರೆ. ೨೦೦೪ರಲ್ಲಿ ಮಕ್ಕಳನ್ನು ಸ್ಥಳೀಯ ಸರ್ಕಸ್ ಮಾಫಿಯಾದಿಂದ


ಪಾರುಮಾಡುವಾಗ ಕೈಲಾಶ್ ಸತ್ಯಾರ್ಥಿ ಮತ್ತು ಸಹೋದ್ಯೋಗಿಗಳ ಮೇಲೆ ಮಾರಕ ದಾಳಿ ನಡೆಸಲಾಯಿತು. ೧೭ ಮಾರ್ಚ್ ೨೦೧೧ರಂದು ಉಡುಪು ತಯಾರಿಯ ಬೆವರು ದುಡಿತದ ಮನೆಗಳಿಂದ ಗುಲಾಮ ಮಕ್ಕಳನ್ನು ಪಾರುಮಾಡುವಾಗ, ಅವರ ಮತ್ತು ಸಹೋದ್ಯೋಗಿಗಳ ಮೇಲೆ ದಾಳಿ ಮಾಡಲಾಯಿತು. ಇಂತಹ ದಾಳಿಗಳು ಮತ್ತು ಅನೇಕ ಬಾರಿ ತಮ್ಮ ಕಚೇರಿಯನ್ನು ಧ್ವಂಸಗೊಳಿಸಲಾಯಿತಾದರೂ ತಮ್ಮ ಧ್ಯೇಯದ ಬಗ್ಗೆ ಅವರ ಬದ್ಧತೆ ಒಂದಿನಿತೂ ಕುಗ್ಗಿಲ್ಲ. 'ಮಕ್ಕಳನ್ನು ಪಾರುಮಾಡುವ ಪ್ರಯತ್ನದಲ್ಲಿ ನನ್ನ ಕಾಲು ಮುರಿದಿದೆ, ತಲೆ ಒಡೆದಿದೆ, ಬೆನ್ನು ಮುರಿದಿದೆ, ಭುಜ ಮುರಿದಿದೆ – ಹೀಗೆ ನನ್ನ ದೇಹದ ಅನೇಕ ಅಂಗಗಳನ್ನು ಮುರಿಯಲಾಗಿದೆ.' ' ನಾನು ಇಬ್ಬರು ಸಹೋದ್ಯೋಗಿಗಳನ್ನು ಕಳೆದುಕೊಂಡಿದ್ದೇನೆ – ಒಬ್ಬರಿಗೆ ಗುಂಡಿಕ್ಕಲಾಗಿದೆ, ಇನ್ನೊಬ್ಬರನ್ನು ಬಡಿದು ಸಾಯಿಸಲಾಗಿದೆ. ನನ್ನ ಅನೇಕ ಕಿರಿಯ ಸಹೋದ್ಯೋಗಿಗಳಂತೂ ಬಾರಿ ಬಾರಿಗೂ ಬಡಿತ ತಿಂದಿದ್ದಾರೆ.'ಎಂದು ಅವರು ಹೇಳುತ್ತಾರೆ. ಹೀಗೆ ಈ ಹೋರಾಟ ಸುಲಭವಲ್ಲ.

ದುರುಪಯೋಗದ ಬಲವಂತದ ಮದುವೆಗಾಗಿ ಮಾರಲ್ಪಟ್ಟ ಬಾಲಕಿಯರನ್ನು ಪಾರುಮಾಡುವ ಕಾರ್ಯಾಚರಣೆಗಳನ್ನು ಇತ್ತೀಚೆಗೆ ಅವರು ಆರಂಭಿಸಿದ್ದಾರೆ. ಇದಕ್ಕಾಗಿ ಅವರು ಈ ದೌರ್ಜನ್ಯಕ್ಕೊಳಗಾದ ಎಳೆಯರಿಗೆ ಆಶ್ರಯ ನೀಡಲು ನೂರಾರು ಹಳ್ಳಿಗಳನ್ನು ಪುನರ್ವಸತಿ ಕೇಂದ್ರಗಳನ್ನಾಗಿಸಲು, ಅವರಿಗೆ ಕೌಶಲ್ಯಗಳನ್ನು ಹೇಳಿಕೊಡಲು ಸಹಾಯ ಮಾಡಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿ

ಪಾಕಿಸ್ತಾನದ ಕ್ರಿಯಾವಾದಿ ಮಲಾಲ ಯೂಸುಫ್‌ಜೈ ಜತೆಗೆ ಸತ್ಯಾರ್ಥಿಯವರಿಗೆ 'ಎಳೆಯರು ಮತ್ತು ಮಕ್ಕಳನ್ನು ಹತ್ತಿಕ್ಕುವುದನ್ನು ವಿರೋಧಿಸಿ, ಎಲ್ಲ ಮಕ್ಕಳ ಶಿಕ್ಷಣದ ಹಕ್ಕಿಗಾಗಿ ಹೋರಾಟಗಳನ್ನು ನಡೆಸಿದುದಕ್ಕಾಗಿ' ೨೦೧೪ರಲ್ಲಿ ಐತಿಹಾಸಿಕವಾದ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಯಿತು. ಪ್ರಶಸ್ತಿಯನ್ನು ಪ್ರಕಟಿಸುವಾಗ ನೊಬೆಲ್ ಸಮಿತಿಯು ಹೀಗೆಂದಿತು: 'ಪ್ರತಿಯೊಬ್ಬ ಹಿಂದೂ ಮತ್ತು ಮುಸ್ಲಿಂ, ಭಾರತೀಯ ಮತ್ತು ಪಾಕಿಸ್ತಾನಿಯು ತೀವ್ರವಾದದ ವಿರುದ್ಧ ಹಾಗೂ ಶಿಕ್ಷಣಕ್ಕಾಗಿ ಒಟ್ಟಿಗೆ ಸಾಮಾನ್ಯ ಹೋರಾಟ ಮಾಡಲು ಸೇರಿಕೊಳ್ಳಬೇಕು ಎಂಬುದು ಮುಖ್ಯ ಅಂಶ ಎಂಬುದನ್ನು ನೊಬೆಲ್ ಸಮಿತಿಯು ಪರಿಗಣಿಸುತ್ತದೆ.' ನೊಬೆಲ್ ಪ್ರಶಸ್ತಿ ವಿಜೇತ ಭಾರತೀಯರಲ್ಲಿ ಸತ್ಯಾರ್ಥಿ ಏಳನೆಯವರು ಮತ್ತು ನೊಬೆಲ್ ಶಾಂತಿ ಪ್ರಶಸ್ತಿ ವಿಜೇತರಲ್ಲಿ ೧೯೭೯ರಲ್ಲಿ ಪಡೆದ ಮದರ್ ತೆರೇಸಾ

ನಂತರ ಎರಡನೆಯವರು. ಸತ್ಯಾರ್ಥಿಯವರು ಬಿಬಿಸಿ ಸಂದರ್ಶನದಲ್ಲಿ ಹೀಗೆಂದರು: 'ಇದು ಭಾರತೀಯರಿಗೆಲ್ಲ ದೊಡ್ಡ ಗೌರವ. ತಾಂತ್ರಿಕತೆ, ಮಾರುಕಟ್ಟೆ ಮತ್ತು ಅರ್ಥವ್ಯವಸ್ಥೆ ಇಷ್ಟೆಲ್ಲ ಮುಂದುವರೆದಿರುವಾಗಲೂ ಗುಲಾಮಗಿರಿಯಲ್ಲೆ ಉಳಿದುಬಿಟ್ಟಿರುವ ಎಲ್ಲ ಮಕ್ಕಳಿಗೆ ಇದು ಗೌರವ.' ನೊಬೆಲ್ ಪ್ರಶಸ್ತಿಯನ್ನು ಅವರು ಗುಲಾಮಗಿರಿಯಲ್ಲಿ ನೊಂದ ಮಕ್ಕಳಿಗೆ ಸಮರ್ಪಿಸಿದರು. ಸತ್ಯಾರ್ಥಿಯವರು ವಿವಿಧ ರೀತಿಯ ಶಾಂತಿಯುತ ಪ್ರತಿಭಟನೆಗಳ ಮುಂದಾಳುತ್ವ ವಹಿಸಿದ್ದು, 'ಲಾಭ ಸಂಪಾದನೆಗಾಗಿ ಮಕ್ಕಳ ಗಂಭೀರವಾದ ಶೋಷಣೆಯನ್ನು ಕೇಂದ್ರೀಕರಿಸಿ. . . ಮಹಾತ್ಮ ಗಾಂಧಿಯವರ ಸಂಪ್ರದಾಯವನ್ನು ಮುಂದುವರೆಸಿ' ಎಂದು ನೊಬೆಲ್ ಸಮಿತಿಯು ಹೇಳಿತು. ತಮ್ಮ ಹೋರಾಟದಲ್ಲಿ ಭಾಗಿಯಾಗಿದ್ದು, ೧೯೮೦ರಲ್ಲಿ ಗಣಿ ಮಾಫಿಯಾದವರಿಂದ ಫರೀದಾಬಾದ್‌ನಲ್ಲಿ ಕೊಲ್ಲಲ್ಪಟ್ಟ ತಮ್ಮ ಆಪ್ತ ಸ್ನೇಹಿತರಾದ ಧಾಉಮ್‌ದಾಸ್ ಹಾಗೂ ಆದರ್ಶ್ ಕಿಶೋರ್ ಅವರುಗಳಿಗೆ ಸತ್ಯಾರ್ಥಿಯವರು ತಮ್ಮ ನೊಬೆಲ್ ಪ್ರಶಸ್ತಿಯನ್ನು ಅರ್ಪಿಸಿದರು



ಸಾಧರ ಸ್ವೀಕಾರ

೧) ಪುಸ್ತಕ ಹೆಸರು – **ಲೋಕ ಧರ್ಮಗಳು**
(ಜನಪ್ರಿಯ ಧರ್ಮಗಳು ನಡೆದು ಬಂದ ದಾರಿ)
೨) ಲೇಖಕರು – **ಡಾ.ಹೆಚ್.ರಾಮಚಂದ್ರಸ್ವಾಮಿ**
೩) ಪ್ರಕಾಶಕರು – ಶ್ರೀರಾಮಕೃಷ್ಣ ಆಶ್ರಮ ಯಾದವಗಿರಿ ಮೈಸೂರು
೪) ಬೆಲೆ – ೧೬೦ರೂಗಳು
೫) ಪುಟಗಳು – ೪೮೭

******

೧) ಪುಸ್ತಕದ ಹೆಸರು – **ಸದಾತನ**
(ಚಿಂತನ–ವಿಚಾರಣ–ವಿವರಣ–ಸಂಶೋಧನ
೨) ಲೇಖಕರು – **ವಿದ್ವಾನ್ ಉಮಾಕಾಂತ ಭಟ್ಟ**
೩) ಪ್ರಕಾಶಕರು – ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ
ಕೇಂದ್ರ, ಉಡುಪಿ.
೪) ಬೆಲೆ – ೧೫೦ರೂಗಳು
೫) ಪುಟಗಳು – ೧೮೦

******

೧) ಪುಸ್ತಕದ ಹೆಸರು – **ಗಾಂಧೀಜಿ ಕಥೆಗಳು**
(ಗಾಂಧೀಯವರ ಸಚಿತ್ರ ಜೀವನ ಚಿತ್ರಣ)
೨) ಲೇಖಕರು – **ಡಿ.ಎಸ್.ಚನ್ನಪ್ಪ**
೩) ಪ್ರಕಾಶಕರು – ಅರ್ಕಾವತಿ ಪ್ರಕಾಶನ, ೬೪೨(ಮಹಡಿ),
೧೩ನೇ ಮೇನ್ ೪ನೇ ಹಂತ,
ಟಿ.ಕೆ.ಬಡಾವಣೆ, ಮೈಸೂರು – ೫೭೦೦೦೯
೪) ಪುಟಗಳು – ೨೪

೫) ನಾಲ್ಕನೇಮುದ್ರಣ - ೨೦೧೪
೬) ಬೆಲೆ - ೨೫ರೂಗಳು

******

೧) ಪುಸ್ತಕದ ಹೆಸರು - **ಕುವೆಂಪು ವಿಚಾರಗಳು**
೨) ಸಂಪಾದಕ - **ಎಸ್.ಚನ್ನಪ್ಪ**
೩) ಪ್ರಕಾಶಕರು - ಕುವೆಂಪು ವಿಚಾರ ವೇದಿಕೆ, ೬೪೨,
೧೩ನೇ ಮೇನ್,
ಟಿ.ಕೆ.ಬಡಾವಣೆ, ಮೈಸೂರು-೫೭೦೦೦೯
೪) ಪುಟಗಳು - ೩೨
೫) ಬೆಲೆ - ೨೫ರೂಗಳು
೬) ಮೊದಲಮುದ್ರಣ - ೨೦೧೨

******

೧) ಪುಸ್ತಕದ ಹೆಸರು - **ಗಾಂಧೀ ತತ್ವಗಳು**
(ನಿತ್ಯ ಸತ್ಯ)
೨) ಲೇಖಕರು - **ಆರೂರು ಮಂಜುನಾಥ ರಾವ್**
೩) ಪ್ರಕಾಶಕರು - ಆರೂರು ಮಂಜುನಾಥ ರಾವ್,
"ಶಾಂತಿವನ", ಕೀರ್ತಿನಗರ,
ಆರೂರು- ೫೭೬ ೨೧೩ ಉ.ಕನ್ನಡ ಜಿಲ್ಲೆ
೪) ಪುಟಗಳು - ೪೮
೫) ಬೆಲೆ - ೨೦ರೂಗಳು

ಜನಪದ ನಿಲಯದ ಅಂತರಂಗದಲ್ಲಿ - ೧೩೦



ಸಾಮಾಜಿಕ ಜೀವನದ ಯಾವುದೇ ಕ್ಷೇತ್ರದಲ್ಲಿಯ ವಿಶೇಷ ಸಾಧನೆಗಾಗಿ ಓರ್ವ ವ್ಯಕ್ತಿಗೆ ಸಮಾಜ ಕೊಡಮಾಡುವ ಮೊತ್ತವು ಹೇಗೆ ಉಪಯೋಗಿಸಲ್ಪಟ್ಟಿದೆ ಎಂಬ ಬಗ್ಗೆ ಕೆಲವರಲ್ಲಿಯಾದರೂ ಕುತೂಹಲ ಉಂಟಾಗುವುದು ಸಹಜ. ಅದರಲ್ಲಿಯೂ ವಿಶೇಷವಾಗಿ ಸಾಹಿತಿಗೆ ಮತ್ತು ಸಮಾಜ ಸೇವಕನಿಗೆ ದೊರೆಯುವ ಮೊತ್ತದ ಉಪಯೋಗದ ಬಗ್ಗೆ ಹೆಚ್ಚಿನ ಕುತೂಹಲ ಇದ್ದರೆ ಅದೇನು ಆಶ್ಚರ್ಯದ ಮಾತಲ್ಲ. ಯಾಕೆಂದರೆ ಸಾಹಿತಿ ಮತ್ತು ಸಮಾಜ ಸೇವಕ ತಮ್ಮ ಕೃತಿಗಳ ಮೂಲಕ ಸಮಾಜದ ಲೇಸನ್ನೆ ಬಯಸುತ್ತಿರುತ್ತಾರೆ. ಅಂಥ ವ್ಯಕ್ತಿಯ ಜೇಬಿಗೆ ದೊಡ್ಡ ಮೊತ್ತವೆಂದು ಸೇರಿಕೊಂಡಾಗ ಆ ಮೊತ್ತದ ಉಪಯೋಗ ಆ ವ್ಯಕ್ತಿ ಹೇಗೆ ಮಾಡಿದನೆಂಬ ಬಗ್ಗೆ ಕುತೂಹಲ ಉಂಟಾಗುವುದು ಸಹಜ. ಜಮ್ನಾಲಾಲ್ ಬಜಾಜ್ ಪ್ರಶಸ್ತಿಯೊಂದಿಗೆ ಹತ್ತು ಲಕ್ಷ ರೂಪಾಯಿ ದೊರೆತಾಗ ಅದರ ಉಪಯೋಗದ ಬಗ್ಗೆ ಹಲವರಲ್ಲಿಯಾದರೂ ಕುತೂಹಲ ಉಂಟಾಗಿರಬಹುದೆಂದು ಊಹಿಸಿ ಆ ಕುರಿತಾದ ಕೆಲ ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಲು ಬಯಸಿದ್ದೇನೆ. ಈ ಕುತೂಹಲ ಹೆಚ್ಚಾಗಿ ಸಮೀಪದ ಬಂಧುಗಳಲ್ಲಿ ಕಾಣಿಸಿಕೊಂಡಿದ್ದರೆ ಅದೇನು ವಿಶೇಷ ಸಂಗತಿಯಲ್ಲ.

ಎಪ್ಪತ್ತು ವರ್ಷದಷ್ಟು ದೀರ್ಘಕಾಲೀನ ಸಮಾಜಸೇವಾ ಅವಧಿಯಲ್ಲಿ ಸ್ವಂತ ಸಂಪಾದನೆಯೆಂದು ಯಾವುದನ್ನೂ ಮತ್ತು ಎಂದೂ ಮಾಡಿದ್ದಿಲ್ಲ. ಒಂದು ಸಾವಿರ ರೂಪಾಯಿಯವರೆಗೆ ನೋಟನ್ನು ಎಣಿಸಿದ್ದು ಕೆಲ ಅಪರೂಪದ ಸಂದರ್ಭಗಳಲ್ಲಿ ಮಾತ್ರ. ಸ್ವಂತವಾದ ಯಾವುದೇ ಸಂಪಾದನೆ ಇಲ್ಲದೆ ಇದ್ದುದರಿಂದ ಬ್ಯಾಂಕ್ ಖಾತೆ ಹೊಂದುವ ಪ್ರಮೇಯವೇ ಬರಲಿಲ್ಲ. ಪರಿವಾರದವರ ಯಾರ ಹೆಸರಿನಲ್ಲಿಯೂ ಜೀವ ವಿಮೆ ಇಲ್ಲದಿರುವುದರಿಂದ ಬ್ಯಾಂಕ್ ಖಾತೆ ಪ್ರಾರಂಭಿಸುವುದಕ್ಕೆ ಇನ್ನಾವ ಕಾರಣವೂ ಇರಲಿಲ್ಲ. ಜನಪದ ಸೇವಾ ಟ್ರಸ್ಟ್ ಪ್ರಾರಂಭಿಸಿದ ಕೆಲವಾರು ವರ್ಷ ಯಾವುದೇ ಸಂಭಾವನೆ ಇಲ್ಲದೆ ಕೆಲಸ ಮಾಡಲಾಗಿತ್ತು. ಆನಂತರ ಸಂಭಾವನೆ ಕೊಡುವ ವ್ಯವಸ್ಥೆ ಉಂಟಾಯಿತಾದರೂ ದೊರೆಯುತ್ತಿದ್ದ ಸಂಭಾವನೆ ಕೇವಲ ಮುನ್ನೂರು ರೂಪಾಯಿಗಳು ಮಾತ್ರ. ಟ್ರಸ್ಟಿನ ಆಶ್ರಯ ಇದ್ದುದರಿಂದ ಮುನ್ನೂರು ರೂ ಜೀವನಕ್ಕೆ ಸಾಕಾಗುತ್ತಿತ್ತು.

ಉಳಿತಾಯದ ಪ್ರಶ್ನೆ ಇರಲಿಲ್ಲ. ಮುಂದೆ ೧೯೫೪ರಲ್ಲಿ ಜಯಪ್ರಕಾಶ್ ನಾರಾಯಣರ ಸೇವೆಯಿಂದ ಬಿಡುಗಡೆಗೊಂಡು ಮೇಲುಕೋಟೆಯಲ್ಲಿ ನೆಲೆಸಿದಾಗ ನನ್ನ ಜೀವನ ನಿರ್ವಹಣೆಗಾಗಿ ಒಂದು ವರ್ಷದ ಕಾಲಾವಧಿಗೆ ಏರ್ಪಾಡುಮಾಡಿದ್ದು ಮಾಹೆಯಾನ ಐವತ್ತು ರೂಪಾಯಿ ಮಾತ್ರ. ಈ ಮೊತ್ತವನ್ನು ಸರ್ವ ಸೇವಾ ಸಂಘ ಪ್ರತಿತಿಂಗಳೂ ಮನೆಯಾರ್ಡರ್ ಮೂಲಕ ಕಳುಹಿಸುತ್ತಿತ್ತು. ಆದ್ದರಿಂದ ಈ ಅವಧಿಯಲ್ಲೂ ಹಣದ ಉಳಿತಾಯದ ಪ್ರಸಂಗವೇ ಬರಲಿಲ್ಲ. ಈ ರೀತಿಯಾಗಿ ಎಪ್ಪತ್ತು ವರ್ಷ ಕಳೆಯಿತು. ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಸ್ಥಿರ ಮತ್ತು ವರ ಆಸ್ತಿ ಮಾಡಲು ಪ್ರಯತ್ನವನ್ನೇ ಮಾಡಲಿಲ್ಲ. ಏಕೆಂದರೆ ಅಂಥ ವಿಚಾರವೆ ಮನಸ್ಸಿನಲ್ಲಿ ಎಂದೂ ಸುಳಿದಿರಲಿಲ್ಲ. ಪೂರ್ವಜರಿಂದಲೂ ದೊರೆತಂಥ ಯಾವ ಆಸ್ತಿಯೂ ಇರಲಿಲ್ಲ. ಸಮಾಜ ಸೇವೆಯಲ್ಲಿಯೇ ಯೌವನ ಕಳೆದು ವೃದ್ಧಾಪ್ಯ ತಲುಪಿದ ವೇಳೆಗೆ ಸರಿಯಾಗಿ ಜಮ್ನಾಲಾಲ್ ಬಜಾಜ್ ಪ್ರಶಸ್ತಿಯ ಮೊತ್ತ ದೊರೆಯಿತು. ವಯೋಮಾನಕ್ಕೆ ಅನುಗುಣವಾಗಿ ಶಾರೀರಿಕ ತೊಂದರೆಗಳು ನಮ್ಮೀರ್ವರನ್ನು ಕಾಡಲು ಪ್ರಾರಂಭಿಸಿದವು. ಪ್ರಶಸ್ತಿಯ ಪ್ರಕಟಣೆಯಾಗಿ ದೊರೆಯುವ ಮೊತ್ತ ಗೊತ್ತಾದ ಕೂಡಲೇ ಬಂದ ವಿಚಾರಗಳು ಯೋಗ್ಯವಾಗಿದ್ದವು. ಬಂದ ಮೊತ್ತದಲ್ಲಿ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ತಲಾ ಒಂದು ಲಕ್ಷ ರೂಪಾಯಿ ಕೊಡುವುದೆಂದು ಉಳಿದ ಹಣವನ್ನು ಕರ್ನಾಟಕ ಸರ್ವೋದಯ ಮಂಡಲಿಯ ಮೂಲಕ ಸರ್ವೋದಯ ಕೆಲಸಕ್ಕಾಗಿ ವ್ಯಯಿಸಬೇಕೆಂಬ ವಿಚಾರ ಬಂದಿತು. ಪ್ರಶಸ್ತಿ ಪ್ರಧಾನ ಸಮಾರಂಭ ಮುಂಬಯಿಯಲ್ಲಿ ನಡೆದು ಪ್ರಶಸ್ತಿಯ ಮೊತ್ತ ಕೈಗೆ ಬಂದಾಗ ಮೇಲೆ ಬಂದ ವಿಚಾರಗಳೇ ಬೇರೆತೆರನಾದವು. ಕುಟುಂಬದ ಸದಸ್ಯರೆಲ್ಲರೂ ಸೇರಿ ತಮ್ಮ ಅಭಿಪ್ರಾಯವನ್ನು ತಳಿಸಿದರು. ಅವರ ಅಭಿಪ್ರಾಯ ಈ ರೀತಿ ಇತ್ತು "ಕುಟುಂಬದ ಯಾವ ಸದಸ್ಯರಿಗೂ ಹಣ ಕೊಡುವ ಅಗತ್ಯವಿಲ್ಲ. ಪ್ರಶಸ್ತಿಯ ಇಡೀ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡಬೇಕು. ಠೇವಣಿಯಿಂದ ಬರುವ ಆದಾಯದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಖರ್ಚುವೆಚ್ಚಗಳನ್ನು ನಿರ್ವಹಿಸಿಕೊಳ್ಳಬೇಕು ಮತ್ತು ಅಗತ್ಯವೆನಿಸಿದ ಕಡೆಗೆ ಪ್ರವಾಸದ ಖರ್ಚಿಗಾಗಿ ಉಪಯೋಗಿಸಿಕೊಳ್ಳಬೇಕು. ಅಗತ್ಯವುಳ್ಳವರಿಗೆ ಸಹಾಯ ಮಾಡಬೇಕು. ಈ ಮೂರು ವಿಷಯಗಳಲ್ಲಿ ಯಾರನ್ನೂ ಹೆಚ್ಚಾಗಿ ಅವಲಂಬಿಸದೆ ಸ್ವತಂತ್ರವಾಗಿ ಇರುವುದು ಒಳ್ಳೆಯದು". ಈ ಸಲಹೆಯನ್ನು ಕುರಿತು ಕೆಲ ಆಪ್ತ ಸ್ನೇಹಿತರಲ್ಲಿ ಮಾತನಾಡಿ ಅವರ ಅಭಿಪ್ರಾಯವನ್ನು ಕೂಡ ತಿಳಿಯಲಾಯಿತು. ಅವರೂ ಇದಕ್ಕೆ ತಮ್ಮ ಸಮ್ಮತಿ ಸೂಚಿಸಿದರು. ಆ ಪ್ರಕಾರ ಈಗ ಪ್ರಶಸ್ತಿಯ ಹತ್ತು ಲಕ್ಷ ರೂಪಾಯಿಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೇಲುಕೋಟೆ ಶಾಖೆಯಲ್ಲಿ ಠೇವಣಿ ಇಡಲಾಗಿದೆ.

ಸರ್ವೋದಯ ಆಂದೋಲನದ ಮುನ್ನಡೆ

ಕರ್ನಾಟಕ ಸರ್ವೋದಯ ಮಂಡಲಿಯ ಸ್ವರ್ಣ ಮಹೋತ್ಸವ

ವಿಜ್ಞಾನ, ತಂತ್ರಜ್ಞಾನ, ಅಭಿವೃದ್ಧಿ ಈ ಮೂರು ಶಕ್ತಿಗಳು ಜಗತ್ತನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸುತ್ತಿದೆಯೆಂಬ ಭೀತಿ ಎಲ್ಲರ ಮನಸ್ಸಿನಲ್ಲಿ ಮೂಡಿದೆ. ಇದು ಸಾಲದೆಂಬಂತೆ ನಮ್ಮ ದೇಶದಲ್ಲಿ ಅನ್ಯಾಯ, ಅತ್ಯಾಚಾರ, ಹಿಂಸಾಚಾರ, ಭ್ರಷ್ಟಾಚಾರಗಳ ನಗ್ನ ನೃತ್ಯ ನಡೆಯುತ್ತಿದೆ. ಮಾನವನ ಸ್ವಾರ್ಥ ಪರಿಸರವನ್ನು ದಿನೇ ದಿನೇ ಹಾಳುಮಾಡುತ್ತಿದೆ. ರಾಜಕೀಯ ಪಕ್ಷ ಮತ್ತು ಸರ್ಕಾರದ ಮೇಲೆ ಮತದಾರನ ಹಿಡಿತ ತಪ್ಪಿದೆ. ಯಾವ ಮೌಲ್ಯಾಧಾರಿತವಾಗಿ ಸಮಾಜದ ಒಟ್ಟು ವ್ಯವಹಾರಗಳು ನಡೆಯಬೇಕು ಎಂಬುದು ಸ್ಪಷ್ಟವಾಗಿಲ್ಲ. ಜಗತ್ತಿನ ಕೆಲ ಪ್ರಮುಖ ರಾಜಕೀಯ ಸಿದ್ಧಾಂತಗಳು ನೆಲಕಚ್ಚಿವೆ. ಇಂಥ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಮಗೆ ಆಶಾದಾಯಕವಾಗಿರುವ ಸಿದ್ಧಾಂತ ಸರ್ವೋದಯ ಸಿದ್ಧಾಂತ ಒಂದೇ. ಕರ್ನಾಟಕದಲ್ಲಿ ಸರ್ವೋದಯ ಆಂದೋಲನವನ್ನು ಯಥಾಶಕ್ತಿ ನಡೆಸಿಕೊಂಡು ಬರುತ್ತಿರುವ ಸಂಸ್ಥೆ ಕರ್ನಾಟಕ ಸರ್ವೋದಯ ಮಂಡಲ. ಇದು ಸ್ಥಾಪಿತವಾಗಿ ೫೩ವರ್ಷಗಳಾದವು. ಮಂಡಲದ ೫೦ನೇ ವರ್ಷದ ಬೆಳ್ಳಿ ಹಬ್ಬವನ್ನು ಜರೂರಾಗಿ ಆಚರಿಸಬೇಕಿದೆ. ತನ್ಮೂಲಕ ಕರ್ನಾಟಕ ರಾಜ್ಯದಲ್ಲಿ ಸರ್ವೋದಯ ಆಂದೋಲನವನ್ನೂ ಮತ್ತು ಸಂಘಟನೆಯನ್ನೂ ಬಲಪಡಿಸಬೇಕಿದೆ. ಈ ಕಾರ್ಯಕ್ರಮಕ್ಕೆ ರಾಜ್ಯದ ಖಾದಿ ಸಂಸ್ಥೆಗಳು ಮತ್ತು ಸ್ವಯಂಸೇವಾಸಂಸ್ಥೆಗಳು ಕೈಜೋಡಿಸುವುದು ಅಗತ್ಯವಾಗಿದೆ. ಬೆಳ್ಳಿ ಹಬ್ಬದ ಆಚರಣೆಯ ರೂಪರೇಶೆಗಳ ಬಗ್ಗೆ ಚರ್ಚಿಸಿ ಕೈಗೊಳ್ಳಲಾಗುವ ತೀರ್ಮಾನವನ್ನು ಅನುಷ್ಠಾನಗೊಳಿಸುವ ಬಗ್ಗೆ ಯೋಚಿಸಲು ಇದೇ ಫೆಬ್ರವರಿ ೨೧ ಶನಿವಾರ ಬೆಳಿಗ್ಗೆ ೧೧ ಗಂಟೆಗೆ ಕರ್ನಾಟಕ ಸರ್ವೋದಯ ಮಂಡಲದ ಆವರಣ ಬೆಂಗಳೂರಿನಲ್ಲಿ ಸರ್ವೋದಯ ಸಿದ್ಧಾಂತದ ಅಭಿಮಾನಿಗಳ ಸಭೆ ಕರೆಯಲಾಗಿದೆ. ಈ ವಿಷಯದಲ್ಲಿ ಆಸಕ್ತಿಯಿರುವ ಯಾರೇ ಆಗಲಿ ಈ ಸಭೆಯಲ್ಲಿ ಭಾಗವಹಿಸಬಹುದು. ದಯಮಾಡಿ ಮಹತ್ವದ ಈ ಸಭೆಗೆ ನೀವು ತಪ್ಪದೇ ಬರಬೇಕಾಗಿ ಕೋರುತ್ತೇವೆ. ಬರುವುದನ್ನು ಪತ್ರ ಅಥವಾ ದೂರವಾಣಿ : ೯೧೪೧೭೦೦೮೧೨ ಮುಖೇನ ತಿಳಿಸಬೇಕಾಗಿ ವಿನಂತಿ.

******

ದಿಲ್ಲಿಯಲ್ಲಿ ಸರ್ವೋದಯ ದಿನದ ಕಾರ್ಯಕ್ರಮಗಳು

ಕಳೆದ ಡಿಸೆಂಬರ್‌ನಲ್ಲಿ ರಾಜಸ್ಥಾನದ ರಾಣಿ ಎಂಬಲ್ಲಿ ನಡೆದ ಸರ್ವ ಸೇವಾ ಸಂಘದ ಅಧಿವೇಶನದಲ್ಲಿ ದೇಶದಲ್ಲಿ ತಲೆ ಎತ್ತುತ್ತಿರುವ ಧಾರ್ಮಿಕ ಮೂಲಭೂತವಾದಿ ಶಕ್ತಿಗಳ ಬಗ್ಗೆ ತನ್ನ ಚಿಂತೆ ವ್ಯಕ್ತಪಡಿಸುತ್ತಾ ದೇಶದ ಎಲ್ಲೆಡೆ ೨೦೧೫ನೇ ಫೆಬ್ರವರಿ ೧೨ರಂದು ಸರ್ವೋದಯ ದಿನವೆಂದು ಆಚರಿಸಬೇಕೆಂದು ಕರೆಕೊಟ್ಟಿತು. ಆ ದಿನ ಸರ್ವಜನೀಯ ಪ್ರಾರ್ಥನೆ ನಡೆಸಬೇಕು. ಸರ್ವಧರ್ಮೀಯರನ್ನೂ ಒಳಗೊಂಡ ಮೆರವಣಿಗೆ ನಡೆಸಬೇಕು. ರಾಷ್ಟ್ರ ಏಕತೆ ಮತ್ತು ಸರ್ವಧರ್ಮ ಸಮಭಾವದ ಬಗ್ಗೆ ವಿಚಾರಗೋಷ್ಠಿಗಳನ್ನು ನಡೆಸಬೇಕು ಎಂದು ತಿಳಿಸಲಾಗಿದೆ.

******

ಇತ್ತೀಚೆಗೆ ರಾಜಸ್ಥಾನದ ರಾನಿ ಎಂಬಲ್ಲಿ ನಡೆದ ಸರ್ವ ಸೇವಾ ಸಂಘದ ಕಾರ್ಯಸಮಿತಿಯಲ್ಲಿ ಉತ್ತರಾಖಂಡ ಪ್ರದೇಶ ಸರ್ವೋದಯ ಮಂಡಲದ ಅಧ್ಯಕ್ಷರು ಸರ್ವ ಸೇವಾ ಸಂಘದ ಮತ್ತು ವಿಭಿನ್ನ ಸರ್ವೋದಯ ಪ್ರದೇಶ ಮಂಡಳಿಗಳ ಕಾರ್ಯಾವಧಿಯನ್ನು ಮೂರು ವರ್ಷದಿಂದ ಐದು ವರ್ಷಕ್ಕೆ ಹೆಚ್ಚಿಸಬೇಕೆಂದು ಸಲಹೆ ಕೊಟ್ಟರು. ಈ ವಿಷಯವಾಗಿ ಚರ್ಚೆ ಆದ ನಂತರ ಎಲ್ಲ ಪ್ರದೇಶ ಸರ್ವೋದಯ ಮಂಡಳಿಗಳ ಅಭಿಪ್ರಾಯ ಪಡೆದು ಸಂಘದ ಮುಂದಿನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕೆಂದು ಅಭಿಪ್ರಾಯಪಡಲಾಯಿತು.

******

ರಾಜಸ್ಥಾನದ ಪಾಲಿ ಜಿಲ್ಲೆಯ ಖಿಮೇಲ್ ಬಳಿ ೧೯೫೧ರಿಂದ ಭೂದಾನದಲ್ಲಿ ಪ್ರಾಪ್ತವಾದ ೭೩ ಎಕರೆ ಪ್ರದೇಶದಲ್ಲಿ ನಡೆಯುತ್ತಿರುವ ೬೩ ವರ್ಷಗಳಷ್ಟು ಹಳೆಯದಾದ ಸರ್ವೋದಯ ಕೇಂದ್ರದ ಜಮೀನನ್ನು ಆನಂದ ಮೆಹ್ತ ಎಂಬುವವರು ಈ ಭೂಮಿ ತಮ್ಮ ತಂದೆಯ ಸ್ವಂತ ಆಸ್ತಿಯೆಂದು ಅದನ್ನು ಕಿತ್ತುಕೊಳ್ಳಲು ಗುಂಡಾಗಿರಿ ಮಾಡುತ್ತಿದ್ದಾರೆ. ಆನಂದ ಮೆಹ್ತ ಭಾರತೀಯ ಜನತಾ ಪಕ್ಷದ ಪದಾಧಿಕಾರಿಯಾಗಿದ್ದಾರೆ. ಸ್ಥಳೀಯ ಅಧಿಕಾರಿಗಳು ಕೂಡ ಅವರಿಗೆ ಬೆಂಬಲವಾಗಿ ನಿಂತಿದ್ದಾರೆ. ಈ ಸಂಗತಿಯನ್ನು ಎಲ್ಲ ಸರ್ವೋದಯ ಕಾರ್ಯಕರ್ತರು ಖಂಡಿಸುತ್ತಾರೆ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ರಾಜ್ಯದ ಮುಖ್ಯಮಂತ್ರಿ ವಸುಂಧರ ರಾಜೆಯವರನ್ನು ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ ನ್ಯಾಯ ಒದಗಿಸಿಕೊಡಬೇಕೆಂದು ಸರ್ವೋದಯ ಕಾರ್ಯಕರ್ತರು ವಿನಂತಿಸುತ್ತಾರೆ.

ದಿಲ್ಲಿಯಲ್ಲಿ ಸರ್ವೋದಯ ದಿನದ ಕಾರ್ಯಕ್ರಮಗಳು

ಕಳೆದ ಡಿಸೆಂಬರ್‌ನಲ್ಲಿ ರಾಜಸ್ಥಾನದ ರಾಣಿ ಎಂಬಲ್ಲಿ ನಡೆದ ಸರ್ವ ಸೇವಾ ಸಂಘದ ಅಧಿವೇಶನದಲ್ಲಿ ದೇಶದಲ್ಲಿ ತಲೆ ಎತ್ತುತ್ತಿರುವ ಧಾರ್ಮಿಕ ಮೂಲಭೂತವಾದಿ ಶಕ್ತಿಗಳ ಬಗ್ಗೆ ತನ್ನ ಚಿಂತೆ ವ್ಯಕ್ತಪಡಿಸುತ್ತಾ ದೇಶದ ಎಲ್ಲೆಡೆ ೨೦೧೫ನೇ ಫೆಬ್ರವರಿ ೧೨ರಂದು ಸರ್ವೋದಯ ದಿನವೆಂದು ಆಚರಿಸಬೇಕೆಂದು ಕರೆಕೊಟ್ಟಿತು. ಆ ದಿನ ಸರ್ವಜನೀಯ ಪ್ರಾರ್ಥನೆ ನಡೆಸಬೇಕು. ಸರ್ವಧರ್ಮೀಯರನ್ನೂ ಒಳಗೊಂಡ ಮೆರವಣಿಗೆ ನಡೆಸಬೇಕು. ರಾಷ್ಟ್ರ ಏಕತೆ ಮತ್ತು ಸರ್ವಧರ್ಮ ಸಮಭಾವದ ಬಗ್ಗೆ ವಿಚಾರಗೋಷ್ಠಿಗಳನ್ನು ನಡೆಸಬೇಕು ಎಂದು ತಿಳಿಸಲಾಗಿದೆ

ಸನ್ಮಾನ್ಯರಿಂದ

ಗಾಂಧೀ ವಿಚಾರ ಪ್ರಣೀತ ಏಕೈಕ ಮಾಸಿಕ ಡೈಜೆಸ್ಟ್ ಎಂದರೆ ನಿಮ್ಮ ಸಂಪಾದಕತ್ವದಲ್ಲಿನ 'ಜನಪದ ವಿಚಾರ'. ಮೌಲಿಕ ವಿಚಾರಗಳಿಂದ ಕೂಡಿದ್ದು, ವರ್ತಮಾನಕ್ಕೆ ಆರೋಗ್ಯಕರವಾಗಿ ಸ್ಪಂದಿಸುತ್ತಿದೆ – 'ಜನಪದ ವಿಚಾರ'. ನನ್ನ ಚಂದಾಹಣ ಮುಗಿದಿದ್ದರೂ ನನ್ನ ಮೇಲಿನ ಪ್ರೀತಿಯಿಂದ ನನಗೆ ಪ್ರತಿತಿಂಗಳೂ ತಪ್ಪದೆ ಕಳುಹಿಸುತ್ತಿರುವ ನಿಮ್ಮ ವಿಶ್ವಾಸಕ್ಕೆ ನಾನು ಮೂಕನಾಗಿದ್ದೇನೆ. ನಿಮ್ಮ ನಂಬಿಕೆ ನನ್ನ ಉಢಾಪೆತನವನ್ನು ಸೋಮಾರಿತನವನ್ನು ಗೆದ್ದಿದೆ ! ಇದು 'ಗಾಂಧೀಜಿಯ', 'ಗಾಂಧೀತನದ ಚೇತನದ ಜಯ' ಎಂದು ಭಾವಿಸುತ್ತೇನೆ. 'ಜಮ್ನಾಲಾಲ್ ಬಜಾಜ್' ಪ್ರಶಸ್ತಿ ಪುರಸ್ಕೃತರಾದ ತಮಗೆ ಅಭಿನಂದನೆಗಳು. ತುಂಬ ವಿಳಂಬಿತನಾಗಿ ಚಂದಾಹಣ ಮರುಪಾವತಿಗಾಗಿ ವಿಷಾದಿಸುತ್ತೇನೆ.

ಭಾರತೀನಗರ ಶ್ರೀ.ಎಂ.ಬಿ.ಶೇಖರ್.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ.ಪ್ರಭಾ ವೆಂಕಟೇಶ್, ಶ್ರೀ.ಹೆಚ್.ಎಸ್.ಸುರೇಶ್,
ಶ್ರೀ.ಬಾಪೂಹೆದ್ದೂರ ಶೆಟ್ಟಿ, ಶ್ರೀ.ಎನ್.ಕಲ್ಲಪ್ಪ, ಶ್ರೀ.ಕೆ.ಸಿ.ರಘು – ಬೆಂಗಳೂರು
ಶ್ರೀ.ಎಮ್.ಎನ್.ಶಿವಶಂಕರ್, ಶ್ರೀ.ಈ.ಧನಂಜಯ – ಮೈಸೂರು
ಡಾ.ಸುಜಯ್ ಕುಮಾರ್ – ಶ್ರೀರಂಗಪಟ್ಟಣ
ಶ್ರೀ.ಎಮ್.ಬಿ.ಶೇಖರ್ – ಭಾರತೀನಗರ
ಶ್ರೀ.ಜಿ.ವಿ.ವಿ.ಶಾಸ್ತ್ರಿ – ತುಮಕೂರು
ಶ್ರೀ.ಟಿ.ಎನ್.ಕುಮಾರಸ್ವಾಮಿ – ಆನೇಕಲ್
ಶ್ರೀ.ಗುರುರಾಜ ಹಬ್ಬು – ಜಮಖಂಡಿ

ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾಗಿದ್ದಾಕ್ಕಾಗಿ

ಶ್ರೀ.ಹೊರೆಯಾಲ ದೊರೆಸ್ವಾಮಿ – ಮೈಸೂರು
ಶ್ರೀಮತಿ.ಟಿ.ಎಲ್.ರೇಖಾಂಬ – ಶಿವಮೊಗ್ಗ
ಶ್ರೀಮತಿ. ಸಂತೋಷಕುಮಾರಿ ಅಮೀನಗಡ –ಇಲಕಲ್ಲು, ಬಾಗಲಕೋಟೆ
ಶ್ರೀ.ಬಿ.ಆರ್.ರಮೇಶ್ – ಹೊಳೇನರಸೀಪುರ
ಶ್ರೀ.ಡಿ.ಜಯಪಾಲ್
ಶ್ರೀ.ಹೆಚ್.ವಿ.ವೆಂಕಟರಾಮಯ್ಯ – ಬೆಂಗಳೂರು

ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.net
Printed at Sanketh Mudrna, Melkote